# ಎಲ್ಲರೊಡನೆ ಹೇಗೆ ಸಾಗಬೇಕು

## ಮತ್ತಾಯ 7:1-12, ವಚನ 3-12ರ, ಒಂದು ನಿಕಟ ನೋಟ

ನಮ್ಮ ಹಿಂದಿನ ಪ್ರಸಂಗದಲ್ಲಿ ನಾವು (ಇತರ ಎಲ್ಲಾ ತತ್ವಗಳೊಡನೆ) ಎಲ್ಲರೊಡನೆ ಹೇಗೆ ಸಾಗಬೇಕು ಎಂದು ಬೋಧಿಸುವ ಪರಿಚ್ಛೇದದ ಜೊತೆ ಮತ್ತಾಯ 7:1-12ರ ಅಧ್ಯಯನವನ್ನು ಪ್ರಾರಂಭಿಸಿದ್ದೆವು. ಸಂಬಂಧಗಳ ಬಗೆಗಿನ ಎಲ್ಲರೊಡನೆ ಹೇಗೆ ಜೊತೆಯಾಗಿರುವ ಆರು ಅವಶ್ಯಕ ಸಂಗತಿಗಳ ಆರು ಸಲಹೆಗಳನ್ನು ನಮ್ಮ ವೇದಭಾಗದಿಂದ ತೆಗೆದುಕೊಳ್ಳುವುದಾಗಿ ನಾನು ವಾಗ್ದಾನಮಾಡಿದ್ದೆನು. ಮೊದಲ ಸಲಹೆಯು ವಚನ 1 ಮತ್ತು 2 ಮೇಲೆ ಇರುವುದಾಗಿದೆ: "ತೀರ್ಪುಮಾಡಬೇಡಿರಿ; ಹಾಗೆ ನಿಮಗೂ ತೀರ್ಪಾಗುವದಿಲ್ಲ. ನೀವು ಮಾಡುವ ತೀರ್ಪಿಗೆ ಸರಿಯಾಗಿ ನಿಮಗೂ ತೀರ್ಪಾಗುವದು; ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು." ಈ ವಚನಗಳಿಂದ ಎಲ್ಲರೊಡನೆ ಹೇಗೆ ಸಾಗಬೇಕೆನ್ನುವ ಮೊದಲನೆಯ ಅವಶ್ಯಕತೆಯನ್ನು ಎತ್ತಿ ತೆಗೆಯುವವರಾಗಿದ್ದೇವೆ. ಅದು ಇತರರಿಗೆ ತೀರ್ಪು ಮಾಡುವುದನ್ನು ನಾವು ನಿಲ್ಲಿಸಲೇಬೇಕು. ಈ ತತ್ವಕ್ಕೋಸ್ಕರ ಯೇಸು ಖಂಡಿಸಿದಂತ ಐದಾದರೂ ಸಾಮಾನ್ಯ ಅಭ್ಯಾಸಗಳನ್ನು ನಾನು ಪ್ರತಿಪಾದಿಸಲಿದ್ದೇನೆ:

- ನಮ್ಮ ಹಿನ್ನಲೆ, ಪೂರ್ವಗ್ರಹ ಮತ್ತು ಆದ್ಯತೆ ನಮ್ಮ ನ್ಯಾಯತೀರ್ಪಿನ ಮೇಲೆ ಪ್ರಭಾವ ಹೊಂದುವದು.
- ಎಲ್ಲಾ ಸತ್ಯಾಂಶಗಳನ್ನು ಹೊಂದದೆ ಅಥವಾ ಎಲ್ಲಾ ಪರಿಸ್ಥಿತಿಯನ್ನು ಕುರಿತು ಯೋಚಿಸದೆ ದುಡುಕಿನ ನ್ಯಾಯ ತೀರ್ಪನ್ನುಮಾಡುವ ಕರೆ.
- ಇನ್ನೊಬ್ಬರ ಉದ್ದೇಶಗಳಿಗೋಸ್ಕರ ನ್ಯಾಯತೀರ್ಪನ್ನು ಮಾಡಲು ಪ್ರಯತ್ನಿಸುವದು.
- ಜನರ ಒಳ್ಳೆಯದನ್ನು ಯೋಚಿಸುವ ಬದಲು ಸಾಧ್ಯವಾದಷ್ಟು ಕೆಟ್ಟದ್ದನ್ನು ಮುಂದೆ ಇರಿಸುವವರಾಗಿರುತ್ತಾರೆ.
- ನಮ್ಮ ನ್ಯಾಯತೀರ್ಪನ್ನು ಕರುಣೆ ಮತ್ತು ಪ್ರೀತಿಯಲ್ಲಿ ಸೆಳೆಯಲ್ಪಟ್ಟ ನ್ಯಾಯತೀರ್ಪಿನ ಬದಲು ಕಠೋರವಾಗಿರುವ, ಕಹಿಯಾಗಿರುವದು, ಮತ್ತು ವಿಪರೀತ ವಿಮರ್ಶಾತ್ಮಾಪೂರಕವಾಗಿರುವ ನ್ಯಾಯತೀರ್ಪು.

ಇವೆಲ್ಲವುಗಳು ಸಾರ್ವತ್ರಿಕವಾದ ತಪ್ಪುಗಳು ಆಗಿವೆ. ಈವೆಲ್ಲವುಗಳ ದೋಷದಲ್ಲಿರುವ ಒಬ್ಬನನ್ನು ಬಹುಶಃ ನೀವು ತಿಳಿದಿರಬಹುದು, ನಿಮಗೆ ತಿಳಿದಿಲ್ಲವೇ?

ಈ ಪ್ರಶ್ನೆಯನ್ನು ಕೇಳುದರಲ್ಲಿ, ನಾನು ಕ್ಷಮೆ ಕೇಳುತ್ತೇನೆ. ಇದೊಂದು ಕೇವಲ ಕೌಶಲದ ಪ್ರಶ್ನೆಯಾಗಿದೆ. ಯಾರಾದರೂ ನಿಮ್ಮ ಮನದಲ್ಲಿ ಬಂದದ್ದಾಗಿದ್ದರೆ ನೀವು ಆ ವ್ಯಕ್ತಿಯನ್ನು ತೀರ್ಪುಮಾಡಬಹುದು. ಕೊನೆಪಕ್ಷ, ಮತ್ತಾಯ 7:1, 2ರಲ್ಲಿ ಅನ್ವಯಿತವಾಗುವ ಸತ್ಯರ್ಥಗಳನ್ನು ಬೇರೆಯವರಿಗೆ ಹಚ್ಚುವ ಅಪರಾಧವನ್ನು ನಾನು ನಿನಗೆ ಹಚ್ಚಿದ್ದುಂಟು. ನಾನು ಇದನ್ನು ಎಲ್ಲರೊಡನೆ ಹೇಗೆ ಸಾಗಬೇಕು ಎರಡನೆಯ ತತ್ವವನ್ನು ಪರಿಚಯಿಸುವುದಕ್ಕೋಸ್ಕರ ಉದ್ದೇಶಪೂರ್ವಕವಾಗಿ ಇನ್ನು ಮಾಡಿದ್ದೇನೆ.

## ಎಲ್ಲರೊಡನೆ ಸಾಗುವುದಕ್ಕೋಸ್ಕರ ಅವಶ್ಯವಾದ 2:

## ನಮ್ಮ ಜೀವಿತದಲ್ಲಿ ಅವಶ್ಯವಾದ ಬದಲಾವಣೆಗಳನ್ನು ನಾವು ಮೊದಲು ಮಾಡಬೇಕು (ವಚನಗಳು 3-5).

ಬದಲಾವಣೆಯ ಅವಶ್ಯಕತೆಯು ಬಂದಾಗ ನಾವು ಬೇರೆಯವರತ್ತ ನೋಡುತ್ತೇವೆಯೇ ವಿನಃ ನಮ್ಮತ್ತಲ್ಲ. ಯೇಸು ಇದನ್ನು ಅರಿತುಕೊಂಡಿದ್ದನು ಆತನು ಹೀಗೆ ಹೇಳಿದನು,

> ನೀನು ನಿನ್ನ ಕಣ್ಣಲ್ಲಿರುವ ತೊಲೆಯನ್ನು ಯೋಚಿಸದೆ[1] ನಿನ್ನ ಸಹೋದರನಿಗೆ ನಿನ್ನ ಕಣ್ಣಲಿರುವ ರವೆಯನ್ನು ತೆಗೆಯುತ್ತೇನೆ ಬಾ ಎಂದು ಹೇಳುವದು ಹೇಗೆ? ನಿನ್ನ ಕಣ್ಣಿನಲ್ಲಿ ತೊಲೆಯಿದೆಯಲ್ಲಾ,[2] ಕಪಟಿಯೇ, ಮೊದಲು ನಿನ್ನ ಕಣ್ಣಿನೊಳಗಿಂದ ತೊಲೆಯನ್ನು ತೆಗೆದುಹಾಕಿಕೋ; ಆ ಮೇಲೆ ನಿನ್ನ ಸಹೋದರ ಕಣ್ಣೀನೊಳಗಿಂದ ರವೆಯನ್ನು ತೆಗೆಯುವುದಕ್ಕೆ ಚೆನ್ನಾಗಿ ಕಾಣಿಸುವದು (ವಚನಗಳು 3-5).

ಈ ಪರಿಚ್ಛೆದವ ಹಾಸ್ಯದ ಲೇಪನವನ್ನು ಹೊಂದಿದೆ.[3] ಯೇಸು ಜೋಕುಗಳನ್ನು ಹೇಳುತ್ತಿರಲಿಲ್ಲ. ಆದರೆ ಆತನು ಹಾಸ್ಯವನ್ನು ಬಳಸುತ್ತಿದ್ದನು; ಒಬ್ಬನ ಕಣ್ಣಿನೊಳಗೆ ತೊಲೆಯಿದ್ದು ಅದು ಹೊರಚಾಚಿ ಬರುವಂತಿದ್ದು ತನ್ನನ್ನು ತಾನೇ ನೋಡಿ ಕೊಳ್ಳಲು ಕಷ್ಟಪಡುತ್ತಿರುವ ಒಬ್ಬ ಮನುಷ್ಯನು ಮತ್ತೊಬ್ಬನ ಕಣ್ಣಲ್ಲಿನ ಚಿಕ್ಕ ರವೆಯನ್ನು ತೆಗೆಯುವುದನ್ನು ಊಹಿಸಿಕೊಳ್ಳಿರಿ. ದೊಡ್ಡ ತೊಲೆಯು ಇಲ್ಲಿಂದ ಅಲ್ಲಿಯವರೆಗೆ ಓಲಾಡುತ್ತಿರುವುದನ್ನು ನೀನು ನೋಡಬಲ್ಲೆಯಾ, ಅವರು ಹತ್ತಿರಬಂದಂತೆ ಅದು ಡೊಂಕಾಗಿತಲೆ ಡಿಕ್ಕಿಹೊಡೆದಂತೆ ತಡೆಯುತ್ತದೆಯೋ?[4] ಇದು ಅಸಾಧ್ಯ ಎಂದು ಯೇಸು ತಿಳಿದಿದ್ದಾನೆ. ನಾವೇ ಕೆಟ್ಟ ಪರಿಸ್ಥಿತಿಯಲ್ಲಿದ್ದಾಗಲೂ ನಾವು ತೀರ್ಪುಮಾಡಲು ಪ್ರಯತ್ನಿಸುವದು ಹಾಸ್ಯಾಸ್ಪದವಾದದ್ದು ಎಂದು ನಾವು ತಿಳುಕೊಳ್ಳುವಂತೆ ಯೇಸು ಬಯಸುತ್ತಾನೆ.[5]

ಕ್ರಿಸ್ತನು ಶಾಸ್ತ್ರಿಗಳು ಮತು ಫರಿಸಾಯರ ಕಪಟತನವನ್ನು ಯೋಚಿಸುತ್ತಿರಬಹುದು. ಆದರೆ ಈ ಪರಿಚ್ಛೇದದ ಸತ್ಯವು ನಮಗೂ ಕೂಡಾ ಮನವರಿಕೆ ಮಾಡುವಂತದ್ದಾಗಿದೆ. ನಮ್ಮ ತಪ್ಪುಗಳನ್ನು ಅಲಕ್ಷಿಸಿ ಇತರರ ತಪ್ಪುಗಳನ್ನು ಎತ್ತಿ ಆಡುವದು ಎಷ್ಟು ಸರಳವಲ್ಲವೇ! ಬೆತ್ಸೆಬಳೊಡನೆ ವ್ಯಭಿಚಾರ ನಡೆಸಿ ಅವಳ ಗಂಡನನ್ನು ಕೊಲ್ಲಿಸಿದ ಅರಸನಾದ ದಾವೀದನ ಕಥೆಯು ನೆನಪಿದೆಯಲ್ಲಾ (2 ಸಮುವೇಲ 11)? ಬಡವನ ಕುರಿಯನ್ನು ಕೊಂದ ಶ್ರೀಮಂತ ಮನುಷ್ಯನ ಬಗೆಗಿನ ಕಥೆಯನ್ನು ನಾತಾನನು ದಾವೀದನಿಗೆ ಹೇಳಿದನು. “ನೀನೇ ಆ ಮನುಷ್ಯನು” ಎಂದು ನಾತಾನನು ಹೇಳುವವರೆಗೆ ದಾವೀದನುಆ ದೋಷಿಯನ್ನು “ಗಲ್ಲಿಗೇರಿಸಲು” ಸಿದ್ಧನಿದ್ದನು[6] (2 ಸಮುವೇಲ 12:1-7). ನಂತರ, ಗಲ್ಲಿಗೇರಿಸುವ ಬದಲು ದಾವೀದನು ಪ್ರಾರ್ಥನೆಗಾಗಿ ಸಿದ್ಧನಾದನು (2 ಸಮುವೇಲ 12:13; ಕೀರ್ತನೆ 51; 32).

ಎಲ್ಲರೊಡನೆ ಜೊತೆಯಾಗಿರುವುದಕ್ಕೊಸ್ಕರ ಇರುವ ವಿಷಯದಲ್ಲಿ ಯಾವ ಬದಲಾವಣೆಯನ್ನು ನಮ್ಮಲ್ಲಿ ಮಾಡಿಕೊಳ್ಳುವದು ಅವಶ್ಯವಾಗಿದೆ ಎಂಬುದನ್ನು ನಮ್ಮನ್ನು ನಾವೇ ಮೊದಲು ಪರೀಕ್ಷಿಸಿಕೊಳ್ಳಬೇಕೆಂದು ಯೇಸು ಬಯಸುವವನಾಗಿದ್ದಾನೆ.

ಆಕಸ್ಮಿಕವಾಗಿ 3ನೇಯ ವಚನ ಮೊದಲ ಭಾಗವನ್ನು ಯೇಸುವಿನಿಂದ ಖಂಡನೆಗೆ ಒಳಗಾದ ತೀರ್ಪಿನ ಅಭ್ಯಾಸಗಳ ಪಟ್ಟಿಯಲ್ಲಿ ಇನ್ನೊಂದು ವಿಷಯ ಎಂದು ನಾವು ಸೇರಿಸಬಹುದು. “ನೋಡು”[7] ಎಂದು ಪದದ ಗ್ರೀಕ್ “ಭಾಷಾಂತರವು ಶೋಧಿಸು, ಹತ್ತಿರದಿಂದ ಪರೀಕ್ಷಿಸು”[8] ಎಂಬ ಅರ್ಥವನ್ನು ಕೊಡುತ್ತದೆ. ಒಂದು ರವೆಯನ್ನು ಸರಳವಾಗಿ ಕಾಣಲಾರೆವು. ಯಾರಾದರೊಬ್ಬರು “ನಾನು ನನ್ನ ಕಣ್ಣಲ್ಲಿ ರವೆಯನ್ನು ಹೊಂದಿದ್ದೇನೆ” ಎಂದು ನಿನಗೆ ಹೇಳಿದ್ದಾಗಲೂ ಬೆಳಕು ಸರಿಯಾಗಿ ಅದರ ಮೇಲೆ ಬಿದ್ದಾಗ ಮತ್ತು ನೀನು ಹತ್ತಿರಕ್ಕೆ ಬಲು ಹತ್ತಿರಕ್ಕೆ ಬರದ ಹೊರತು ನೀನು ಅದನ್ನು ನೋಡಲಾರೆ. ಕೆಟ್ಟ ತೀರ್ಪಿನ ಚಟದ ಪಟ್ಟಿಗೆ ಅತೀ

ದೂರಬಳಿಕೆಯಲ್ಲಿರುವ ಲಕ್ಷಣಗಳನ್ನು ಸೇರಿಸಿಕೊಳ್ಳಬಹುದು:

- ಉತ್ತಮವಾದ ಜನರ ಬದಲು ಕೆಟ್ಟ ಜನರಿಗಾಗಿ ಹುಡಕುವದು; ವಿಮರ್ಶೆಯಲ್ಲಿನ ಕೆಲ ತಪ್ಪುಗಳನ್ನು ಹುಡುಕಲು ಪ್ರತಿಯೊಂದು ವಚನವನ್ನು ಮತ್ತು ಕ್ರಿಯೆಯನ್ನು ಪರಿಶ್ರಮಪಟ್ಟು ಶೋಧಿಸುವದು.

ಈ ರೀತಿಯಂತೆ ನಿಖರವಾಗಿ ಶಾಸ್ತ್ರಿಗಳು ಮತ್ತು ಫರಿಸಾಯರು ಯೇಸುವನ್ನು ಇದೇ ರೀತಿ ಯಲ್ಲಿ ನಡೆಸಿಕೊಳ್ಳುತ್ತಿದ್ದು.

ಯೇಸು ಬಳಸಿದ "ರವೆ" ಮತ್ತು "ತೊಲೆ" ಇವುಗಳನ್ನು ಅವುಗಳ ಆಕಾರಗಳಿಗಾಗಿ ಬಳಸಿದನು. ಯಾಕೆಂದರೆ ಈ ವಸ್ತುಗಳು ಅದೇ ಸೃಷ್ಟಿ ಹೊಂದಿರುತ್ತವೆ ಎಂದು ಅನೇಕ ವ್ಯಾಖ್ಯಾನಕಾರರು ಮತ್ತು ಭಾಷಾಂತಕರಾರು ಯೋಚಿಸುವವರಾಗಿದ್ದಾರೆ. ಒಂದು ಅತಿ ಚಿಕ್ಕದು ಇನ್ನೊಂದು ಅತಿದೊಡ್ಡದು, ಆದರೆ ಅವೆರಡೂ ಕಟ್ಟಿಗೆ ಸಂಯೋಜನೆಯೇ ಆಗಿದೆ. "ಮರದ ದಿಮ್ಮಿಯ ದೂಳಿನ ರವೆ" ಎಂದೂ "ಮರದ ಹಲಗೆ" ಎಂದು NIV ಯಲ್ಲಿ ಇದೆ.

ರವೆ ಮತ್ತು ತೊಲೆಯ ಸಾಧ್ಯತೆಗಳು ಅದೇ ತರದ ಪ್ರಚೋದನೆಗಳು ಅದೇ ತರದ ಕೆಲ ಕುತೂಹಲಮಯವಾದ ವಿಚಾರಗಳಿಗಾಗಿ ಇರುವವುಗಳು ಆಗಿವೆ. ನಮ್ಮ ಜೀವಿತದಲ್ಲಿ ಹಲವುಬಾರಿ ಸಂಪೂರ್ಣವಾಗಿ ನಾವು ಇತರ ತಪ್ಪುಗಳ ಬಗೆಗೆ ಬಲು ಸೂಕ್ಷ್ಮಮಿತಿಗಳು ಆಗಿರುವದು ಮಾನವನ ಸ್ವಭಾವದ ವಿಷಯಗಳು ಆಗಿವೆ. ಮಾನಶಾಸ್ತ್ರಜ್ಞರು ಇದನ್ನು "ಕಲ್ಪನೆ ಮಾಡುವದು" ಎಂದು ಕರೆಯುತ್ತಾರೆ; ನಾವು ನಮ್ಮ ಜೀವಿತದಲ್ಲಿ ಕಂಡಂಥದ್ದನ್ನೇ ಇತರರ ಜೀವಿತದಲ್ಲಿ ಯೋಜಿಸುವುದು ಎಂದಾಗಿದೆ. (ಅದು ಪ್ರತಿಯೊಬ್ಬರು ನಮ್ಮಂತೆಯೇ ಇರುತ್ತಾರೆ ಎಂದು ಊಹಿಸಲು ಬಯಸುವವರಾಗಿರುತ್ತೇವೆ.) ಮುಂದೆ, ನಮ್ಮ ಪಾಪಗಳನ್ನು ನಾವು ಬೇರೆಯವರ ಜೀವಿತದಲ್ಲಿ ಕಂಡಾಗ ಅವುಗಳು ಸಾಮಾನ್ಯವಾಗಿ ನಮಗೆ ಬಲುಕೆಟ್ಟದಾಗಿ ಕಾಣುವುದಿಲ್ಲ ಎಂಬುದು ವಾಸ್ತವಾಂಶವಾಗಿದೆ. Bertrand Russellರವರು ಇದನ್ನು ನಾವು ದೃಷಿಸುವ ಸಂದರ್ಭದ ಜೊತೆಯಲ್ಲಿ ದೃಷ್ಟಾಂತೀಕರಿಸುವಾತ್ತ, "ನಾನು ಅಚಲನಾದವನು, ನೀನು ಮೊಂಡನು; ಆತನು ಹಂದಿ ತಲೆಯವನು. ನಾನು ಪುನರ್ ಗಣನೆ ಹೊಂದುವವನು; ನೀನು ನಿನ್ನ ಮನಸ್ಸನ್ನು ಬದಲಾಯಿಸಿದ್ದಿ; ಆತನು ತನ್ನ ಜಗತ್ತಿಗೆ ಹಿಂತಿರುಗಿದನು" ಎಂದು ಹೇಳು ತ್ತಾರೆ ನಿನಗೆ ಒಂದು ವೇಳೆ ಈ ಸತ್ಯವೇದಿಯ ಉದಾಹರಣೆ ಬೇಕಾದಲ್ಲಿ ಯೆಹೂದ್ಯ ಮತ್ತು ಆತನ ಸೊಸೆ ತಮಾರಳ ಕಥೆಯನ್ನು ಗಣನೆಗೆ ತಂದುಕೋ. ತಮಾರಳು "ವ್ಯಭಿಚಾರ ಮಾಡಿ" "ಬಸುರಿಯಾಗಿದ್ದಾಳೆ" ಎಂದು ಯೆಹೂದ್ಯನಿಗೆ ತಿಳಿದಾಗ ಆತನು ಆಕೆಯನ್ನು ಕೊಲ್ಲಲು ಸಿದ್ಧನಾಗುತ್ತಾನೆ (ಆದಿಕಾಂಡ 38:24); ಆದರೆ ತಮಾರಳು ಆ ಮಗುವಿನ ತಂದೆಯು ಯೆಹೂದನೆಂದು ಸಿದ್ಧಮಾಡಿದಾಗ ಮರಣದಂಡನೆಯು ಬೇಗೆ ತಡೆಯಲ್ಪಟ್ಟಿತು (ಆದಿಕಾಂಡ 38:25, 26).

ಈಗ ತೊಲೆಯ ಗಾತ್ರದ ಪಾಪವನ್ನು ಹೊಂದಿದ ಒಬ್ಬ ಮನುಷ್ಯನು ಅದೇ ತರದ ರವೆಯ ಗಾತ್ರದ ಪಾಪಮಾಡಿದ ವ್ಯಕ್ತಿಗಿಂತ ಶ್ರೇಷ್ಟನು ವರ್ತಿಸುವದು ಈ ಹಾಸ್ಯಾಸ್ಪದ ವಾದ ಪರಿಸ್ಥಿತಿ ಎಂಬುದಕ್ಕಾಗಿ ಯೇಸು ಈ ಉದಾಹರಣೆಯನ್ನು ಕಟ್ಟಿಗೆಯಿಂದ ಮಾಡಿದ ಎರಡು ವಸ್ತುಗಳ ಜೊತೆ ಉದ್ದೇಶಪೂರ್ವಕವಾಗಿ ಬಳಸಿದ್ದಾನೆ. ಈ ತರದ ವರ ದುರಭ್ಯಾಸಗಳನ್ನು ಪೌಲನು ರೋಮಾಪರ 2:1-3ರಲ್ಲಿ ಬರೆದಿದ್ದಾನೆ:

> ಆದುದರಿಂದ ಎಲೈ ಮನುಷ್ಯನೇ, ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು ಯಾವನಾದರೂ ಸರಿಯೇ, ಉತ್ತರ ಹೇಳುವುದಕ್ಕೆ ನಿನಗೆ ಮಾರ್ಗವಿಲ್ಲ. ಹೇಗೆಂದರೆ ಮತ್ತೊಬ್ಬರಲ್ಲಿ ದೋಷವೆಣಿಸುವದರಿಂದ ನಿನ್ನನ್ನು ನೀನೇ ದೋಷಿ ಯೆಂದು ತೀರ್ಪು ಮಾಡಿಕೊಂಡ ಹಾಗಾಯಿತು. ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು ಆ

ದೋಷಗಳನ್ನೇ ನಡೆಸುತ್ತಿಯಲ್ಲಾ ಆದರೆ ಅಂಥವುಗಳನ್ನು ನಡೆಸುವವರ ವಿಷಯದಲ್ಲಿ ದೇವರು ಮಾಡುವ ತೀರ್ಪು ಸತ್ಯಕ್ಕನುಸಾರವಾಗಿಯೂ ಇರುವುದೆಂದೂ ಬಲ್ಲೆವು. ಎಲೈ ಮನುಷ್ಯನೇ, ಅಂಥವುಗಳನ್ನು ನಡಿಸುವವರಲ್ಲಿ ದೋಷವೆಣಿಸಿ ಅವುಗಳನ್ನೇ ಮಾಡುತ್ತಿರುವ ನೀನು ದೇವರ ದಂಡನೆಯ ತೀರ್ಪಿಗೆ ತಪ್ಪಿಸಿಕೊಂಡೆನೆಂದು ಎಣಿಸುತ್ತಿಯಾ.

ಈ ರೀತಿ ಸ್ವಭಾದಿಂದ ವರ್ತಿಸುವವರನ್ನು ಯೇಸು ಏನನ್ನುತ್ತಾನೆ? ಯೇಸು ಯಾವ ಪದಗಳನ್ನು ಹೆಚ್ಚಿಸಿಲ್ಲ; ಮತ್ತಾಯ 7:5ರ ಮೊದಲ ಭಾಗದಲ್ಲಿ *"ಕಪಟಿಯೇ"* ಎಂದು ಆತನು ಹೇಳಿದ್ದಾನೆ. *ಕಪಟಿಯಾಗಿರುವದು* ನಮ್ಮನ್ನು *ಕಪಟಿಗಳನ್ನಾಗಿ* ಮಾಡುವುದಾಗಿದೆ. ನಾವು ಇತರರನ್ನು ನಿರಂತರವಾಗಿ ಟೀಕಿಸುತ್ತಾ ಇದ್ದುದಾದರೆ, ನಮ್ಮ ದಾಖಲೆಗಳು ಸ್ವಚ್ಛವಾಗಿವೆ, ನಮ್ಮ ಜೀವಿತವು ಯೋಗ್ಯವಾದದ್ದಾಗಿದೆ - ಇಲ್ಲವಾದರೆ ನಮಗೆ ತೀರ್ಪು ಮಾಡಲು ಅರ್ಹರಾಗುತ್ತಿರಲಿಲ್ಲ ಎಂದು ನಾವು ಸೂಚಿಸುವವರಾಗಿರುತ್ತೇವೆ. ಅದೇ ಸಮಯದಲ್ಲಿ ಈ ರೀತಿಯ ದೊಡ್ಡ ಗಾತ್ರದ ಟೆಲಿಫೋನ ಕಂಬಗಳು[9] ನಮ್ಮ ಕಣ್ಣಿನ್ನು, ಅಂಟಿಕೊಂಡಿರುವುದನ್ನು ನಾವು ಹೊಂದಿರುತ್ತೇವೆ.

ತಿರುಗಿ, ನ್ಯಾಯತೀರ್ಪಿನ ವಿಷಯದಲ್ಲಿ ನಾವು ಹೇಳುವುದೇನೆಂದರೆ, ಅದನ್ನು ನಾವು ನಮ್ಮಿಂದಲೇ ಪ್ರಾರಂಭಿಸಬೇಕು ಎಂದು. "ಮೊದಲು ನಿನ್ನ ಕಣ್ಣೊಳಗಿನ ತೊಲೆಯನ್ನು ತೆಗೆದು ಹಾಕಿಕೋ" ಎಂದು ಯೇಸು ಹೇಳುತ್ತಾನೆ. ಇತರರ ಪಾಪಗಳನ್ನು ಒಪ್ಪಿಕೊಳ್ಳುವದು ಸುಲಭ; ಆದರೆ ನಮ್ಮ ಸ್ವಂತದ ಪಾಪಗಳನ್ನು ಒಪ್ಪಿಕೊಳ್ಳುವದು ಕಷ್ಟಸಾಧ್ಯವಾದದ್ದಾಗಿದೆ. ಪೌಲನು ವಿವಿದ ರೀತಿಯ ಸಂದರ್ಭಗಳಲ್ಲಿ ಸ್ವಪರೀಕ್ಷೆಯನ್ನು ಸೂಚಿಸಿದ್ದಾನೆ: "... ನಿಮ್ಮನ್ನೇ ನೀವು ಪರೀಕ್ಷಿಸಿಕೊಳ್ಳಿ; ನಿಮ್ಮನ್ನು ಪರಿಶೋಧಿಸಿಕೊಳ್ಳಿರಿ" (2 ಕೊರಿಂಥ 13:5); "ಪ್ರತಿಯೊಬ್ಬ ಮನುಷ್ಯನು ತನ್ನನ್ನು ತಾನು ಪರೀಕ್ಷಿಸಿಕೊಂಡು ... ನಮ್ಮನ್ನು ನಾವೇ ವಿಚಾರಿಸಿಕೊಂಡರೆ ನ್ಯಾಯ ವಿಚಾರಣೆಗೊಳಗಾಗುವುದಿಲ್ಲ" (1 ಕೊರಿಂಥ 11:28, 31). ರೋಮಾಪುರ 14:13 ವಿಶೇಷವಾಗಿ ಇದಕ್ಕೆ ಅನ್ವಯಿತವಾಗುವುದಾಗಿದೆ. "ಇನ್ನೊಬ್ಬರೆಡೆಗೆ ಟೀಕಾತ್ಮಕವಾದ ಕಣ್ಣನ್ನು ತಿರುಗಿಸುವುದನ್ನು ನಿಲ್ಲಿಸುವಾ. ನಾವು ಟೀಕಾಕಾರಾಗಿದ್ದೇ ಆದರೆ ನಾವು ಮಾಡಿದಂತವುಗಳಿಗೆ *ವಿಮರ್ಷಕರಾಗೋಣ* ಮತ್ತು ಒಬ್ಬ ಸಹೋದರನು ಎಡವಿದಾಗ ಅಥವಾ *ಬಿದ್ದಾಗ ನಮಗೆ ಮಾಡಲು ಏನೂ ಇರುವುದಿಲ್ಲ.* ಎಂದು ಪಿಲಿಪ್ಪಿರ ಭಾಷಾಂತರವು ಈ ವಚನವನ್ನು ಈ ರೀತಿ ಯಾಗಿ ಹೇಳುತ್ತದೆ"[10] (ಒತ್ತಿ ಹೇಳಿದ್ದು ನನ್ನದು).

ಯಾವ ಪಾಪ/ತೊಲೆಯು ತೊಲಗಿಸಲ್ಪಡಬೇಕು? ಯಾವುದೇ ಪಾಪವು ತೆಗೆದುಹಾಕಲ್ಪಡಬಹುದು - ಆದರೆ ಈ ಸಂದರ್ಭದಲ್ಲಿ ನಾವು ವಿಶೇಷವಾಗಿ ಮಾತನಾಡುತ್ತಿರುವದು ತೀರ್ಪುಮಾಡುತ್ತ ಇರುವ ಪಾಪದ ಬಗೆಗೆ ಆಗಿದೆ.

ಸ್ವಪರೀಕ್ಷೆಯ ವಿಷಯದಲ್ಲೂ ಕೂಡಕೆಲ ಸಾಮಾನ್ಯ ರೀತಿಯು ಇರುವುದಾಗಿದೆ. ನಾವು ವೈಯಕ್ತಿಕ ವಿಫಲತೆಯ ಮತ್ತು ನ್ಯೂನ್ಯತೆಯ ಕೆಲವರು ಕರೆಯುವಂತ "ಅಚಲವಾದ ಸ್ವಯ ಪರೀಕ್ಷೆಯ" ಭೀಕರವಾದ ಗೀಳಿನ ಬಗೆಗೆ ಮಾತನಾಡುತ್ತಿಲ್ಲ. ಅದಲ್ಲದೆ ನಾವು ಇತರರೊಡನೆ ಹೊಂದಿಕೊಂಡಿದ್ದದ್ದಾದರೆ, ನಮ್ಮ ಮೊದಲ ಕಾಳಜಿ ಎಂದರೆ ನಮ್ಮ ಸ್ವಂತದ ಜೀವನದಲ್ಲಿ ಬದಲಾವಣೆ ಮಾಡಿಕೊಳ್ಳುವುದೇ ಆಗಿದೆ. ನಾವು ನಮ್ಮ ಸ್ವಂತದೊಡನೆ ಪ್ರಾರಂಭಿಸಿದ್ದುದಾದರೆ, ನಾವು ಇತರರಿಗೆ ತೀರ್ಪುಮಾಡತ್ತಾ ಇರುವೆಡೆಗೆ ಒಲವಿರುವವರು ಆಗಿರುತ್ತೇವೆ.

ಮೂಲತಹವಾದವುಗಳನ್ನು ಈ ವಚನಗಳು ಒತ್ತಿ ಹೇಳುವುದರಿಂದಾಗಿ ನಾವು ವಚನ 3 ರಿಂದ 5ರವರೆಗಿನ, ವಚನಗಳು ಈಗ ನಾವು ಬಿಡಬೇಕು. ಆದರೆ ಅಂತ್ಯ ಭಾಗಕ್ಕೆ ಬರುವಾಗ ಸಂದರವಾದ ಸತ್ಯಗಳು ಇರುವುದರಿಂದಾಗಿ ಇದನ್ನು ನಾನು ಒತ್ತಿ ಹೇಳಬಯಸುತ್ತೇನೆ.

## ಎಲ್ಲರೊಡನೆ ಸಾಗುವುದಕ್ಕೋಸ್ಕರ ಅವಶ್ಯವಾದ 3:
## ನಾವು ಇತರರಿಗೆ ಸಹಾಯ ಮಾಡುವಲ್ಲಿ ಕಾಳಜಿ ಮತ್ತು ಕರುಣೆಯುಳ್ಳವರಾಗಿರ ಬೇಕು (ವಚನ 5).

ನಾವು ಯಾರನ್ನಾದರೂ ನಿಜವಾಗಿ ಪ್ರೀತಿಸುವುದಾದರೆ ಮತ್ತು ಅವನ ಜೀವಿತದಲ್ಲಿ ಪಾಪವನ್ನು ಕಂಡಿದ್ದಾದರೆ, ಆ ಪಾಪವನ್ನು ತೆಗೆಯಲು ನಾವು ಆತನಿಗೆ ಸಹಾಯ ಮಾಡ ಬೇಕು.[11] ಇದು ವಚನ 5ರ ಕೊನೆಯ ಭಾಗದಲ್ಲಿ ಸೂಚಿಸಲ್ಪಟ್ಟಿದೆ. ಪ್ರತಿಯೊಬ್ಬನು ತನ್ನ ಕಣ್ಣಿನಲ್ಲಿರುವ ತೊಲೆಯನ್ನು ತೆಗೆದುಕೊಳ್ಳುವಂತೆ ಗದರಿಸಿದ ಮೇಲೆ ಯೇಸು, "*ಆಮೇಲೆ* ನಿನ್ನ ಸಹೋದರ ಕಣ್ಣೊಳಗಿಂದ ರವೆಯನ್ನು ತೆಗೆಯುವುದಕ್ಕೆ ಚೆನ್ನಾಗಿ ಕಾಣಿಸುವದು" (ಒತ್ತಿ ಹೇಳಿದ್ದು ನನ್ನದು) ಅಂದನು.[12]

ಅನೇಕ ಪರಿಚ್ಛೇದಗಳು ಸಹೋದರರ ಪಾಪಗಳನ್ನು ಅವನ ಹೃದಯದಿಂದ ಮತ್ತು ಅವನ ಜೀವಿತದಿಂದ ತೆಗೆಯುವುದಕ್ಕೆ ಅವಶ್ಯವಾದ ಸಹಾಯವನ್ನು ಬೋಧಿಸುವವುಗಳು ಆಗಿವೆ:

> ಸಹೋದರರರೇ, ನಿಮ್ಮಲ್ಲಿ ಯಾರಾದರೂ ಯಾವುದೋ ಒಂದು ದೋಷದಲ್ಲಿ ಸಿಕ್ಕಿದರೆ ಅಂಥ ಆತ್ಮನಿಂದ ನಡಿಸಿಕೊಳ್ಳುವ ನೀವು ಶಾಂತಭಾವದಿಂದ ತಿದ್ದಿಸರಿಮಾಡಿರಿ. ನೀನಾದರೂ ದುಷ್ಪ್ರೇರಣೆ ಒಳಗಾಗದಂತೆ ನಿನ್ನ ವಿಷಯದಲ್ಲಿ ಎಚ್ಚರಿಕೆಯಾಗಿರು. ಒಬ್ಬರು ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳಲಿ; ಹೀಗೆ ಕ್ರಿಸ್ತನ ನಿಯಮವನ್ನು ನೆರವೇರಿಸಿರಿ (ಗಲಾತ್ಯ 6:1, 2).

> ನನ್ನ ಸಹೋದರರರೇ, ನಿಮ್ಮಲ್ಲಿ ಒಬ್ಬನು ಸತ್ಯಮಾರ್ಗವನ್ನು ತಪ್ಪಿಹೋಗಿರಲಾಗಿ ಮತ್ತೊಬ್ಬನು ಸನ್ಮಾರ್ಗಕ್ಕೆ ತಂದರೆ ಒಬ್ಬ ಪಾಪಿಯನ್ನು ತಪ್ಪಾದ ಮಾರ್ಗದಿಂದ ತಿರುಗಿಸಿದವನು ಅವನ ಪ್ರಾಣವನ್ನು ಮರಣದಿಂದ ತಪ್ಪಿಸಿ ಬಹುಪಾಪಗಳನ್ನು ಮುಚ್ಚಿದನನಾದನೆಂದು ತಿಳಿದುಕೊಳ್ಳಿರಿ (ಯಾಕೋಬ 5:19, 20).

ಮತ್ತಾಯ 7:3-5ರಲ್ಲಿ ಯೇಸು ಉದಾಹರಿಸಿದ ಕಣ್ಣೊಳಗಿನ ರವೆಯ ಒಬ್ಬನ ಸಹಾಯದ ಅವಶ್ಯಕತೆಯನ್ನು ಎತ್ತಿತೋರಿಸುವುದು ಆಗಿದೆ. ಯಾಕೆಂದರೆ ಕಣ್ಣು ಸೂಕ್ಷ್ಮವಾದ ದ್ದಾಗಿದೆ. ನಿಮಗೆ ಮಕ್ಕಳಿದ್ದೇ ಆದರೆ, "ನನ್ನ ಕಣ್ಣೊಳಗೆ ಏನೋ ಇದೆ" ಎನ್ನುವಲ್ಲಿ ಅವರಲ್ಲಿ ಧ್ವನಿಯಲ್ಲಿನ ದುಗುಡವನ್ನು ನೀವು ಕೇಳಿರಬಹುದು!

ಈ ದೃಷ್ಟಾಂತವು ಒಬ್ಬನ ಸಹಾಯವನ್ನು ತೆಗೆದುಕೊಳ್ಳುವ ಅವಶ್ಯಕತೆಯನ್ನು ಮಾರ್ಗವನ್ನು ಸಹ ಸೂಚಿಸುವುದಾಗಿದೆ. ನನ್ನ ಕಣ್ಣಿನಲ್ಲಿ ಏನಾದರೂ ಇದ್ದುದಾದರೆ ಅದನ್ನು ಹೊರಗೆ ತರುವುದಕ್ಕೆ ನೀನು ಸ್ವಯಂಪ್ರೇರಣೆಯಿಂದ ಕಾರ್ಯಮಾಡಬೇಕು, ನೀನು ಯಾವಾಗಲೂ ಕಾಳಜಿಪೂರಕವಾಗಿಯೂ ಮತ್ತು ಕರುಣೆಯುಳ್ಳವನಾಗಿರುವುದನ್ನು ನಾನು ಬಯಸುವವನಾಗಿದ್ದೇನೆ.[13] ಇತರೊಡನೆ ವ್ಯವಹರಿಸುವಾಗ ನಮಗೆ ಸೂಕ್ಷ್ಮತೆಯ ಅವಶ್ಯಕತೆಯು ಇದೆ. ಅಂತೆಯೇ ಪೌಲನು "ಅಂಥ ಆತ್ಮನಿಂದ ನಡಿಸಿಕೊಳ್ಳುವ ನೀವು ಶಾಂತಭಾವದಿಂದ ತಿದ್ದಿ ಸರಿ ಮಾಡಿರಿ" ಎಂದು ಹೇಳುತ್ತಾನೆ (ಗಲಾತ್ಯ 6:1). ನ್ಯಾಯ ತೀರ್ಪಿನ ದಿನದಂದು ನಾವೆಲ್ಲರೂ ಪವಿತ್ರ ದೇವರ ಮುಂದೆ ಪಾಪಿಗಳಾಗಿದ್ದೇವೆ. ಪ್ರತಿಯೊಬ್ಬರಿಗೂ ಆತ್ಮೀಕವಾಗಿ ಸಹಾಯಮಾಡುವ ಅವಶ್ಯಕತೆಯು ಇದೆ, ಆದ್ದರಿಂದ ನಮ್ಮಲ್ಲಿ ಪ್ರತಿಯೊಬ್ಬರಿಗೂ ಸಹಾಯಮಾಡೋಣ ನಮ್ಮ ಸಹಾಯವನ್ನು ಕಾಳಜಿಪೂರ್ವಕವಾಗಿ ಮತ್ತು ಕರುಣೆಯಿಂದ ಮಾಡುವವರಾಗಿರೋಣ.

## ಎಲ್ಲರೊಡನೆ ಸಾಗುವುದಕ್ಕೋಸ್ಕರ ಅವಶ್ಯವಾದ 4: ಭಿನ್ನಾಭಿಪ್ರಾಯದ ಮತ್ತು ಸಂಕಷ್ಟದ ಮಧ್ಯ ಹೇಗೆ ವ್ಯವಹರಿಸಬೇಕು ಎಂಬುದನ್ನು ನಾವು ಕಲಿಯಲೇಬೇಕು (ವಚನ 6).

ನಾವು "ನಾಯಿಗಳು" ಮತ್ತು "ಹಂದಿಗಳು" ಎಂಬ ವಚನಕ್ಕೆ ನಾವು ಬರುತ್ತೇವೆ (ವಚನ 6). ಇಲ್ಲೊಂದು ಗೂಢ ಪ್ರಶ್ನೆ ಇದೆ: ಯೇಸು ಏನನ್ನು ಹೇಳಬೇಕೆನ್ನುತ್ತಾನೋ ಆ ಉಪದೇಶಕ್ಕೆ ವಿರುದ್ಧವಾದಂತೆ ಇದು ಕಂಡುಬರುತ್ತದೆ. ನಾವು ಸುತ್ತು ಬಳಸಿ ಇತರರನ್ನು "ನಾಯಿಗಳು" ಮತ್ತು "ಹಂದಿಗಳು" ಕರೆಯುವುದಕ್ಕೆ ಹೋಗೋಣವೇ? ನಾವು ಕಪಟಿಗಳು, ದೋಷಹುಡುಕುವವರು, ಸ್ವನಿಯೋಜಕ ವ್ಯತಸ್ಥವಾಗಿ ಬೆಳದವರ ಸಂಶೋಧಕರು "ಅಲ್ಲ," ಆದರೆ ನಾವು ಗಾವೀಲರು ಆಗಿದ್ದೇವೆಯಾ ಎಂಬುದನ್ನು ಕ್ರಿಸ್ತನು ಸಮದೂಗಿಸುವಿಕೆಗಾಗಿ ಇಟ್ಟಿರಬಹುದೆಂದು ನಾನು ಯೋಚಿಸುವವನಾಗಿದ್ದೇನೆ. ದೇವರು ನಮಗೆ ಸಾಮಾನ್ಯ ಪರಿಜ್ಞಾನವನ್ನು ಕೊಟ್ಟಿದ್ದಾನೆ. ಜನ ರೊಡನೆ ವ್ಯವಹರಿಸುವಾಗ ಇದನ್ನು ನಾವು ಬಳಸುವುದನ್ನು ಆತನು ಬಯಸುವವನಾಗಿದ್ದಾನೆ. ನಾವು ನಿರ್ದಯರು ಮತ್ತು ನಿಂದನಾಯುಕ್ತರೂ ಆಗಿರುವುದಿಲ್ಲ, ಆದರೆ ನಿರ್ಲಕ್ಷರೂ ಮತ್ತು ನಂಬುವವರೂ ಆಗಿರುವುದಿಲ್ಲ.

ಯೇಸು ನಮಗೆ 1 ರಿಂದ 5ರವರೆಗಿನ ವಚನಗಳನ್ನು ಮಾತ್ರಕೊಟ್ಟಿದ್ದಾದರೆ, ಖಂಡನೆಗೆ ಅವಕಾಶವಿರುವಂಥದರಲ್ಲಿ ಬಿಡುತ್ತಿದ್ದನು, ನಮ್ಮ ತಲೆಯ ಮೇಲೆ ಬರುವಂಥ ಅಲ್ಪವಾದ ತಪ್ಪಿನ ಯಾವುದೇ ತೀರ್ಪನ್ನು ಮಾಡಲು ಭಯಪಡುತ್ತಿದ್ದೆವು. ವಚನ 6ರಲ್ಲಿ, ಇತರರಿಗಾಗಿ ನಾವು ಮಾಡಲೇಬೇಕಾದ ಕೆಲ ನ್ಯಾಯತೀರ್ಪುಗಳು ಎಂದು ಕರೆಯಲ್ಪಡುವುದನ್ನು ಆತನು ಸೂಚಿಸುವವನಾಗಿದ್ದಾನೆ. ಈ ಸತ್ಯಾಂಶವನ್ನು ಆತನು ನಾಯಿಗಳು ಮತ್ತು ಹಂದಿಗಳು ಎಂಬ ಉದಾಹರಣೆಯ ಮೂಲಕ ದೃಷ್ಟಾಂತಿಕರಿಸಿದ್ದಾನೆ. "ದೇವರ ವಸ್ತುಗಳನ್ನು ನಾಯಿಗಳಿಗೆ ಹಾಕಬೇಡಿರಿ; ನಿಮ್ಮ ಮುತ್ತುಗಳನ್ನು ಹಂದಿಗಳ ಮುಂದೆ ಚೆಲ್ಲಬೇಡಿರಿ. ಚಲ್ಲಿದರೆ ತಮ್ಮ ಕಾಲಿನಿಂದ ಅವುಗಳನ್ನು ತುಳಿದು ಹಿಂತಿರುಗಿ ಬಂದು ನಿಮ್ಮನ್ನು ಸೀಳಾಬಿಟ್ಟಾವು."

ಕ್ರಿಸ್ತನ ಈ ಮಾತುಗಳನ್ನು ಚರ್ಚಿಸುವ ಮೊದಲು ವಿಶೇಷವಾಗಿ, ಆ ದಿನಗಳಲ್ಲಿ ನಾಯಿಗಳು ಮತ್ತು ಹಂದಿಗಳ ಸ್ವಭಾವವನ್ನು ಅರಿತುಕೊಳ್ಳುವದು ನಮಗೆ ಅವಶ್ಯವಿದೆ. ಸಂಪ್ರದಾಯದಂತೆ ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಈ ಎರಡೂ ಅಶುದ್ಧ ಪ್ರಾಣಿಗಳು ಆಗಿವೆ.[14] ನಾಯಿಗಳ ಬಗೆಗೆ ನೀವು ಯೋಚಿಸುವಾಗ, ಸಾಕಲ್ಪಟ್ಟ ಅತಿ ಮುದ್ದಿನ ಸಾಕುಪ್ರಾಣಿಗಳ ಬಗೆಗೆ ಯೋಚಿಸದಿರಿ, ಆದರೆ ಬದಲಾಗಿ ಹೀನವಾದ, ಅನಾಗರೀಕವಾದ, ಮೂಟೆಯಲ್ಲಿರುವ ಕೊಳೆತಮಾಂಸವನ್ನು ತಿನ್ನುವ ಕೊಳಕು ಪ್ರಾಣಿಯ ಬಗೆಗೆ ಯೋಚಿಸಿರಿ. ನಾಯಿ ಎಂಬ ಪದವು ಪಾಪದಲ್ಲಿರುವವರಿಗೆ ವಿಶೇಷವಾಗಿ ಬೈಬಲ್ಲಿನಲ್ಲಿ ಕೆಲ ಸಾರಿ ಬಳಸಲ್ಪಟ್ಟಿದೆ (ಮತ್ತಾಯ 15:26; ಫಿಲಿಪ್ಪಿ 3:2; ಪ್ರಕಟಣೆ 22:15). ಯೆಹೂದಿಗಳ ಮನಸ್ಸಿನಲ್ಲಿ ಹಂದಿಯು ಹೊಲಸುತನಕ್ಕೆ ಸಂಕೇತವಾಗಿತ್ತು. ಈ ಜೀವಿಯ ಪರಿಸ್ಥಿತಿಯು ಎಲ್ಲವೂ ಅಲ್ಲದಿದ್ದರೂ ಹೆಚ್ಚಾಗಿ, ಪಾಲಿಸ್ತೇನಿನ ಹಂದಿಗಳು ಕ್ರೂರವಾಗಿ ನಡೆಸಲ್ಪಡುತ್ತಿದ್ದವು.

ನಂತರ ವಾಸ್ತವವು ಅನೇಕ ವ್ಯಾಖ್ಯಾನಕಾರರಿಂದ ತಪ್ಪಿಹೋದದ್ದಾಗಿದೆ. ವಚನ 6 ರೊಂದಿಗೆ ಕಷ್ಟಪಡುತ್ತಾ ನಾಯಿ ಅಥವಾ ಹಂದಿಗಳ ಬಗೆಗೆ ಮಾತನಾಡುತ್ತಾ, "ಅವುಗಳು ನಿಮ್ಮ ಸೀಳಿಹಾಗುವವು" ಎನ್ನುತ್ತಾರೆ. ಹೀಗೆ ಅವರು ಪ್ರಾಣಿಗಳತ್ತ ತಮ್ಮ ಅಲಕ್ಷತೆಯನ್ನು ತೋರಿ ದ್ದಾರೆ. ಅವುಗಳು ಎಂದಿಗೂ ಮರಿಹಾಕಿದ ಹೆಣ್ಣು ಹಂದಿಯ ಸುತ್ತಲೂ ಎಂದಿಗೂ ಇರುವದಿಲ್ಲ ಯಾಕೆಂದರೆ ನೀವು ಅದರ ಮರಿಗಳತ್ತ ಬಂದಿರುವಿರೆಂದು ತಿಳಿದು ನಿಮ್ಮ ಕಾಲುಗಳನ್ನ ಸೀಳಲು ಪ್ರಯತ್ನಿಸಬಹುದು. ಕಾಡುಹಂದಿಯ ದೌರ್ಜನ್ಯದ ಬಗೆಗೆ ಮಾತನಾಡುತ್ತಾ "ಅವುಗಳು ನಿಮ್ಮ ಸೀಳಿಹಾಕುವವು" ಎನ್ನುತ್ತಾರೆ. ಹೀಗೆ ಅವರು ಪ್ರಾಣಿಗಳತ್ತ ತಮ್ಮ ಅಲಕ್ಷತೆಯನ್ನು

ತೋರಿದ್ದಾರೆ. ಅವುಗಳು ಎಂದಿಗೂ ಮರಿಹಾಕಿದ ಹೆಣ್ಣುಹಂದಿಯ ಸುತ್ತಲೂ ಎಂದಿಗೂ ಇರುವುದಿಲ್ಲ ಯಾಕೆಂದರೆ ನೀವು ಅದರ ಮರಿಗಳತ್ತ ಬಂದಿರುವಿರೆಂದು ತಿಳಿದು ನಿಮ್ಮ ಕಾಲುಗಳನ್ನು ಸೀಳಲು ಪ್ರಯತ್ನಿಸಬಹುದು. ಕಾಡುಹಂದಿಯ ದೌರ್ಜನ್ಯದ ಬಗೆಗೆ ಹೆಸರಾದ ಜಜ್ಜುವುದಕ್ಕೋಸ್ಕರ ಜಜ್ಜುವ ಅದು ಭಯಂಕರ ಪ್ರಾಣಿಗಳಲ್ಲಿ ಒಂದಾಗಿದೆ.[15]

ನಾಯಿಗಳ ಮತ್ತು ಹಂದಿಗಳ ಮನೋಧರ್ಮವನ್ನು ಮನದಲ್ಲಿಟ್ಟುಕೊಂಡು ಅದಕ್ಕೆ ಪ್ರತಿಯಾಗಿ ವಚನ 6ನ್ನು ನೋಡೋಣ. ಯೇಸು ಇನ್ನೊಂದು ಸಾರಿ ಹಾಸ್ಯದ ಸನ್ನಿವೇಶ ವನ್ನು ಮಂಡಿಸುವವನಾಗಿದ್ದಾನೆ. ಆತನು ಮೊದಲು "ನಾಯಿಗಳಿಗೆ ಪವಿತ್ರವಾವನ್ನು" ಕೊಡುವುದರ ಎಂಬುದರ ಬಗೆಗೆ ಮಾತನಾಡಿದನು. ಶ್ವಾನವು ಯಾವುದು ಪವಿತ್ರವಾದದ್ದು ಅಥವಾ ಮೀಸಲಾದದ್ದು ಎಂಬುದರ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸುವದು ಅಸಾಧ್ಯವಾದದ್ದು ಆಗಿದೆ. ಯಜ್ಞವೇದಿಯ ಮೇಲೆ ಇಟ್ಟ ಮಾಂಸವನ್ನು ಯಾಜಕನು ನಾಯಿಳಿಗೆ ಹಾಕುವ ಯೋಚಿಸಲಾಸಾಧ್ಯವಾದ ಪರಿಸ್ಥಿತಿಯನ್ನು ಈ ಪರಿಚ್ಛೇದವು ಸೂಚಿಸುವುದಾಗಿದೆ ಎಂದು ಕೆಲವರು ಯೋಚಿಸುತ್ತಾರೆ. ಇದು ಎಂದಿಗೂ ಮಾಡಲ್ಪಡುವುದಿಲ್ಲ. ಉಳಿದ ಪಶುವಿನ ದೇಹದ ಯಾವುದೇ ಭಾಗವು ಸುಡಲ್ಪಡಲೇ ಬೇಕು (ಯಾಜಕಕಾಂಡ 6:24-30; 7:17).

ನಂತರ ಯೇಸು "ಹಂದಿಗಳ ಮುಂದೆ ಮುತ್ತುನ್ನು ಚೆಲ್ಲುವುದನ್ನು" ಸೂಚಿಸುತ್ತಾನೆ. ನಾಯಿಗಳು ಹೇಗೆ ಪವಿತ್ರವಾದದ್ದನ್ನು ಒಪ್ಪಲಾರವೋ ಹಾಗೆಯೇ ಹಂದಿಗಳೂ ಮುತ್ತುಗಳನ್ನು ಒಪ್ಪಲಾರವು. ಮತ್ತುಗಳು ತಮ್ಮ ಆಹಾರವಲ್ಲವೆಂದು ಅವುಗಳು ತಿಳದೊಡನೆ (ಬಹುಶಃ ಆ ಮುತ್ತುಗಳನ್ನು ತಿನ್ನಲು ಪ್ರಯತ್ನಿಸಿ ಹಲ್ಲನ್ನು ಮುರುದುಕೊಂಡ ಮೇಲೆ) ವಾಸ್ತವವಾಗಿ ಅವುಗಳ ಎಳೆದು ತಂದು "ತಿರುಗಿ ನಿಮ್ಮನ್ನು ಸೀಳಿಬಿಡುವವು." ಬಹು ದಿನಗಳ ಹಿಂದೆ ನಾನು ಬೆಳಕು ಹರಿಯುವ ಮೊದಲು ಹಂದಿಗಳಿಗೆ ಊಟಹಾಕುವದಕ್ಕಾಗಿ ಎದ್ದುದರ ಕಡೆಗೆ ನನ್ನ ಮನಸ್ಸು ತಿರುಗುವುದಾಗಿದೆ. ಹಳೆಯ ಲೋಹದ ಬಕೇಟಿನಲ್ಲಿ ತಮ್ಮ ಊಟವನ್ನು ಕೂಡಿಸುತ್ತಿರುವ ಸದ್ದನ್ನು ಕೇಳುತ್ತಿದ್ದಂತೆಯೇ ಹಂದಿಗಳು ಆತುರದಿಂದ ಹೋಗುತ್ತಿದ್ದವು. ಅವುಗಳಿದ್ದ ಬೇಲಿಯ ಹತ್ತಿರ ನಾನು ಹೋಗುತ್ತಿದ್ದಂತೆ ಅವುಗಳು ಕೀರಲು ಧ್ವನಿಯಿಂದ ಕಿರುಚುತ್ತಾ ಮತ್ತು ಒಂದರ ಮೇಲೆಂದೂ ಹತ್ತುತ್ತಾ ಇದ್ದವು. ಮೂರು ಅಥವಾ ನಾಲ್ಕು ಹಸಿದ ಹಂದಿಗಳಿಗೆ ತಪ್ಪದೆ ಸಿಕ್ಕುವಂತೆ ಅವುಗಳ ತೊಟ್ಟಿಯಲ್ಲಿ ಆಹಾರ ಸುರಿಯುವದು ನನಗೆ ಕಷ್ಟಸಾಧ್ಯವಾಗಿತ್ತು. ತೊಟ್ಟಿಯೊಳಗೆ ಈ ಕಡಲೆಕಾಳು ಮತ್ತು ಹಾಲಿನ ಮಿಶ್ರಣದ ಬದಲು ಮುತ್ತುಗಳನ್ನೇದಾರೂ ಹಾಕಿದ್ದಾದರೆ, ಇದು ಅದೇ ಎಂದು ಹಂದಿಗಳು ಕಂಡುಹಿಡಿದುಬಿಡುತ್ತಿದ್ದವು ಎಂದು ನನಗೆ ಖಚಿತವಾಗಿದೆ. ಆ ಬೇಲಿಯು ಗಟ್ಟಿಯಾಗಿರಲಿ ಎಂದು ನಾನು ಯಾವಾಗಲೂ ಪ್ರಾರ್ಥಿಸುವವನಾಗಿದ್ದೆನು!

ಈಗ ನಾವು ಹೀಗೆ ಕೇಳಬಹುದು "ಯೇಸು ಸೂಚಿಸಿದ 'ನಾಯಿಗಳು' ಮತ್ತು 'ಹಂದಿಗಳು' ಯಾರು?" ಆ ಪ್ರಶ್ನೆ ಯಾವದು ಪವಿತ್ರವಾದದು ಮತ್ತು "ಮುತ್ತುಗಳು" ಎಂದು ಯಾವವು. ಯೇಸು ದೇವರ ರಾಜ್ಯವನ್ನು (ಸಭೆಯನ್ನು) "ಬಹು ಮೌಲ್ಯವುಳ್ಳ ಮುತ್ತುಗಳು" ಎಂದು ಸೂಚಿಸಿದ್ದಾನೆ (ಮತ್ತಾಯ 13:45, 46). ದೇವರ ರಾಜ್ಯದ (ಸಭೆಯ) ಬಗೆಗಿನ ಸಂದೇಶವು ಒಳ್ಳೆಯ ವಾರ್ತೆ (ಸುವಾರ್ತೆ) ಆಗಿದೆ (ನೋಡಿ ಮತ್ತಾಯ 4:23; 9:35; 24:14). ದೇವರ ವಾಕ್ಯವು ಪವಿತ್ರವಾದದ್ದಾಗಿದೆ (ರೋಮಾಪುರ 1:2; 2 ಪೇತ್ರ 2:21), ಮತ್ತು ಪವಿತ್ರ ಸಂದೇಶವು "ಖಜಾನೆಯಂತೆ" ಹೇಳಲ್ಪಡುತ್ತದೆ (2 ಕೊರಿಂಥ 4:7).

ಇದೆಲ್ಲವೂ ಇರುವುದನ್ನು ನಿಜವಾದದ್ದಾದರೆ, ನಿರಂತರವಾಗಿ ಸತ್ಯವನ್ನು ತಿರಸ್ಕರಿಸುವ, 1 ತೀತ 1:15ರಲ್ಲಿ ಇರುವ ತರದವರಂತೆ ಹೇಳಲ್ಪಟ್ಟ "ಮೇಲಿನರಾದವರಿಗೂ ನಂಬಿಕೆಯಿಲ್ಲದವರಿಗೂ ಯಾವದೂ ಶುದ್ಧವಲ್ಲ" ಅವರ ಬುದ್ಧಿಯೂ ಮನಸಾಕ್ಷಿಯು ಎರಡು ಮಲಿನವಾಗಿರುತ್ತದೆ ಎಂದು ಆತ್ಮೀಕ ಗೌರವವನ್ನು ಹೊಂದದ ವ್ಯಕ್ತಿಗಳಿಗೆ ವಾಕ್ಯವನ್ನು ಕೊಡುವುದರ ವಿರುದ್ಧ ಎಚ್ಚರಿಸುವಂತವನಾಗಿದ್ದಾನೆ ಎಂದು ಅನೇಕ ವ್ಯಾಖ್ಯಾನಕಾರರು ನಂಬುವವರಾಗಿದ್ದಾರೆ. ತನ್ನ ಮಾತುಗಳನ್ನು ಒಪ್ಪಿಕೊ ಳ್ಳುವುದನ್ನು ನಿರಾಕರಿಸುತ್ತಿರುವ ಶಾಸ್ತ್ರಿ

ಮತ್ತು ಫರಿಸಾಯರನ್ನು ಯೇಸು ತನ್ನ ಮನದಲ್ಲಿಟ್ಟುಕೊಂಡಿರಬಹುದು.

ಕೆಲ ವ್ಯಾಖ್ಯಾನುಕಾರರು ವಚನ 6ರಲ್ಲಿನ ಈ ವಿವರಣೆಯನ್ನು ಅಪವಾದ ಎಂದು ತೆಗೆದುಕೊಂಡರು, ಆದರೆ ಪರಿಚ್ಛೇದದ ಸರಳವಾದ ವಿವರಣೆಯಾಗಿದೆ ಮತ್ತು ಇತರ ವೇದಭಾಗದ ಪರಿಚ್ಛೇದಗಳಿಗೆ ಹೊಂದಿಕೆಯಾಗುವುದಾಗಿದೆ ಎಂದು ಹೇಳುವವರಾಗಿದ್ದಾರೆ. ಅವರು ತಿರಸ್ಕರಿಸಲ್ಪಟ್ಟಾಗ ಅವರ ಕಾಲಿಗೆ ಹತ್ತಿದ ಧೂಳನ್ನು ಜಾಡಿಸಿಬಿಡಲು[16] ಮತ್ತು ಅಲ್ಲಿಂದ ಹೊರಟುಬಿಡಲು ಹೇಳುವಲ್ಲಿ ಯೇಸು "ಮಿತಿಯುಳ್ಳ ನಿಯೋಗ"ದ ಬಗೆಗೆ ತನ್ನ ಶಿಷ್ಯರಿಗೆ ಹೇಳುತ್ತಾನೆ (ಮತ್ತಾಯ 10:13, 14).[17] ಪ್ರತಿಸಾರಿ ಪೌಲನ ಪ್ರಸಂಗವು ಯೆಹೂದಿಗಳಿಂದ ತರಿಸ್ಕರಿಸುತ್ತಾ ಬಂತು, ಆತನು ಅನ್ಯರೆಡೆಗೆ ಸಾಗಿದನು (ಅಪೊಸ್ತಲರ ಕೃತ್ಯಗಳು 13:44-51; 18:5, 6; 19:9; 28:17-28).

ತೀರ್ಪುಮಾಡುವದಕ್ಕೆ ಇದು ಕಷ್ಟವಾದದ್ದಾಗಿದೆ. ಮುಂದಾಗಿಯೇ ಒಬ್ಬರನ್ನು "ನಾಯಿಗಳು" "ಹಂದಿ" ಎಂದು ನಿರ್ಧರಿಸಲು ನಮಗೆ ಯಾವ ಹಕ್ಕು ಇಲ್ಲ. ಪ್ರೀತಿಯು ಯಾವಾಗಲೂ ಒಳ್ಳೆಯದನ್ನೇ ಮಾಡುವುದಾಗಿರುತ್ತದೆ, ಪ್ರತಿಯೊಬ್ಬರಿಗೂ ಸುವಾರ್ತೆ ಯನ್ನು ಕೇಳುವ ಅವಕಾಶವನ್ನು ನಾವು ಕೊಡಲೇಬೇಕು (ಮತ್ತಾಯ 28:18-20; ಮಾರ್ಕ 16:15, 16), ಇನ್ನೊಂದೆಡೆ ಒಬ್ಬರಿಗೆ ನಿರಂತರವಾಗಿ ಬೋಧಿಸಲು ಪ್ರಯತ್ನಿಸುವುದಾದರೆ, ಮತ್ತು ಅವರು ತಿರಸ್ಕರಿಸುತ್ತಾ ಇದ್ದರೆ ಒಂದೆಡೆಯಲ್ಲಿ, ಸಾಮಾನ್ಯ ಪರಿಜ್ಞಾನವು (ನಮ್ಮ ಸಮಯದ ಒಳ್ಳೆಯ ಮನೆವಾರ್ತೆಯಾಗಿರುವ ತತ್ವವು[18]) "ಹಂದಿಗಳ ಮುಂದೆ ಮುತ್ತನ್ನು ಚಲ್ಲುವುದನ್ನು ನಿಲ್ಲಿಸು ಮತ್ತು ಬೋಧಿಸಲು ಮತ್ತೊಬ್ಬರನ್ನು ಹುಡುಕು" ಎಂದು ಹೇಳುತ್ತದೆ.[19]

7:1-12ರಲ್ಲಿನ ಯೇಸುವಿನ ದೃಷ್ಟಾಂತವು ನಾವು ವಿಭಿನ್ನ ತರದ ಜನರನ್ನು ಸಂಬಂಧಿಸ ಬೇಕಾಗುವದು, ಮತ್ತು ಪ್ರತಿಯೊಬ್ಬರನ್ನು ಹೇಗೆ ನಡಿಸಿಕೊಳ್ಳಬೇಕೆಂದು ನಾವು ಕಲಿಯ ಬೇಕೆಂದು ಸ್ಪಷ್ಟಮಾಡುವುದಾಗಿದೆ. ಅವರು ಕಣ್ಣಲ್ಲಿ ರವೆಯಿರುವ, ನೋಯಿಸುವ ಜನರಾಗಿದ್ದು, ನಮ್ಮ ಪ್ರೀತಿ ಮತ್ತು ಕಾಳಜಿಯ ಅವಶ್ಯಕತೆಯು ಅವರಿಗೆದೆ. ಅದಲ್ಲದೆ ಎಂದಿಗೂ ಸಹಾಯಮಾಡಲು ಸಮರ್ಥವಾಗದ ಹಂದಿ ಮತ್ತು ನಾಯಿಗಳೂ ಸಹ ಅಲ್ಲಿವೆ. ಅವರು ಅವರಿಗೆ ಹತ್ತಿರವಾಗುವ ಎಲ್ಲಾ ಪ್ರಯತ್ನಗಳನ್ನು ಪ್ರತಿರೋಧಿಸುವವರಾಗಿದ್ದಾರೆ. ಅವರ ಒಂದೇ ಒಂದು ಆಸಕ್ತಿಯೆಂದರೆ ನಮ್ಮನ್ನು ಹೇಗೆ ಹರಿದುಬಿಡಬೇಕೆಂಬುದನ್ನು ದೃಢಪಡಿಸುವುದೇ ಆಗಿದೆ. ಈ ವ್ಯಕ್ತಿಗಳೊಡನೆ ನಾವು ಮಾಡಲು ಉತ್ತಮವಾದದ್ದೆಂದರೆ ಅವರಷ್ಟಕ್ಕೆ ಅವರನ್ನು ಬಿಟ್ಟುಬಿಡುವದು.

ತನ್ನ ಪಾದಗಳನ್ನು ತನ್ನ ಕಣ್ಣೀರಿನಿಂದ ತೊಳೆಯುವ ಸ್ತ್ರೀಯ ಬಗೆಗೆ (ಲೂಕ 7:36-50) ಮತ್ತು ವ್ಯಭಿಚಾರಿಣಿಂದು ತನ್ನ ಬಳಿಗೆ ತಂದ ಸ್ತ್ರಿಯ ಬಗೆಗೆ (ಯೋಹಾನ 8:2-11) ಯೇಸುವಿನ ಅಂಕಣದ ಬಗೆಗೆ ಯೋಚಿಸು. ಆತನ ಸಾರ್ವಜನಿಕ ಖಂಡನೆಯ ಬರಹವನ್ನು ಮತ್ತಾಯ 23ರಲ್ಲಿನ ಕಠಿಣ ಹೃದಯಿಗಳಾದ ಶಾಸ್ತ್ರಿಗಳು ಮತ್ತು ಫರಿಸಾಯರ ಜೊತೆ ಹೋಲಿಸಿರಿ. ತಿರುಗಿ, ತಿರುಗಿ ಆತನು "ನಿಮಗೆ ವ್ಯಥೆಯಾಗುವದು, ಶಾಸ್ತ್ರಿಗಳು ಮತ್ತು ಫರಿಸಾಯರು *ಕಪಟಿಗಳು*" ಹೇಳುತ್ತಾನೆ (ವಚನಗಳು 13-15, 23, 25, 27, 29; ಒತ್ತಿ ಹೇಳಿದ್ದು ನನ್ನದು).

ಹಂದಿ ಮತ್ತು ನಾಯಿಗಳನ್ನು ಕೊಲ್ಲಿರಿ ಎಂದು ಕ್ರಿಸ್ತನು ಎಲ್ಲಿಯೂ ಹೇಳಲಿಲ್ಲ. ಅವುಗಳನ್ನು ಅಷ್ಟಕ್ಕೆ ಬಿಡಿರಿ ಎಂದು ಮಾತ್ರ ಹೇಳಿದನು; ಪವಿತ್ರವಾದ ವಸ್ತುಗಳನ್ನು ಅವುಗಳ ಮುಂದೆ ಚಲ್ಲಬೇಡಿರಿ; ಅವುಗಳಿಗೆ ಮುತ್ತುಗಳನ್ನು ಹಾಕಬೇಡಿರಿ. *"ನಿಮ್ಮಿಂದಾದ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ"* (ರೋಮಾಪುರ 12:18; ಒತ್ತಿ ಹೇಳಿದ್ದು ನನ್ನದು) ಎಂಬ ಪೌಲನ ಬುದ್ಧಿವಾದವು ಇಲ್ಲಿ ಯೋಗ್ಯವಾದದ್ದಾಗಿದೆ.

## ಎಲ್ಲರೊಡನೆ ಸಾಗುವುದಕ್ಕೋಸ್ಕರ ಅವಶ್ಯವಾದ 5:
# ನಾವು ದೇವರ ಮೇಲೆ ಆತುಕೊಳ್ಳುವ ಸಂಕಲ್ಪಮಾಡಿಕೊಳ್ಳಬೇಕು (ವಚನಗಳು 7-11).

ವಚನ 7 ರಿಂದ 11 ಪ್ರಾರ್ಥನೆಯ ಶಕ್ತಿಯ ದೊಡ್ಡ ಪರಿಚ್ಛೇದವನ್ನು ತರುವುದಾಗಿದೆ. ಈ ಪ್ರಸಂಗದಲ್ಲಿ ನಾನು ಅದನ್ನು ವಿವರವಾಗಿ ವ್ಯವಹರಿಸಲಾರೆನು. ನಿಜವಾಗಿ ಹೇಳುವುದಾದರೆ, ನಮ್ಮ ಮುಂದಿನಭಾಗದಲ್ಲಿ ಚರ್ಚಿಸಲಿರುವ: ಇತರರೊಡನೆ ಹೇಗೆ ಸಾಗುವದು ಎಂಬ ವಿಷಯದೊಡನೆ ಈ ಪರಿಚ್ಛೇದವು ಹೇಗೆ ಹೊಂದಿಕೆಯಾಗಿರುವುದು ಎಂದು ಸೂಚಿಸುವದು ನನ್ನ ಉದ್ದೇಶವಾಗಿದೆ.

ನಾವು ತೀರ್ಪುಮಾಡುವವರಾಗಿರಬಾರದು, ನಾವು ಕರುಣೆಯುಳ್ಳವರೂ ಮತ್ತು ವಾತ್ಸಲ್ಯವುಳ್ಳವರೂ ಆಗಿರಬೇಕು ಎಂಬುದನ್ನು ನಮ್ಮ ವೇದಭಾಗದಲ್ಲಿ ನಾವು ಕಲಿತೆವು. ಅದೇ ಸಮಯದಲ್ಲಿ ಮಂದಮತಿಗಳೂ ಆಗಿರಬಾರದು; ನಮ್ಮ ಪಾದಗಳ ಧೂಳನ್ನು ಎಲ್ಲಿ ಜಾಡಿಸಬೇಕೆಂಬುದನ್ನು ಅರಿಯುವದು ನಮಗೆ ಅವಶ್ಯವಿದೆ. ಈ ತೀರ್ಪುಗಳನ್ನು ಮಾಡುವದು ಕಠಿಣವಾದದ್ದಾಗಿದೆ. ಅಂತಕರುಣವುಳ್ಳವರಾಗುವಾಗ ಕಠಿಣರಾಗಿರುವುದನ್ನು ಹೇಗೆ ಕಾದುಕೊಳ್ಳಬೇಕು ಅಥವಾ ಕಠಿಣರಾಗಿರುವಾಗ ಅಂತ ಕರುಣವುಳ್ಳವರಾಗಿರುವುದನ್ನು ಎಂಬುದನ್ನು ಹೇಗೆ ಕಾದುಕೊಳ್ಳಬೇಕು? ವಚನ 7ರಿಂದ 11 ಇದಕ್ಕೆ ನಮಗೆ ಉತ್ತರವನ್ನು ಕೊಡುವುದಾಗಿದೆ. ನಾವು ದೇವರ ಮೇಲೆ ಆತುಕೊಳ್ಳಲೇಬೇಕು:

> ಬೇಡಿಕೊಳ್ಳಿರಿ ನಿಮಗೆ ದೊರೆಯುವದು; ಹುಡುಕಿರಿ ನಿಮಗೆ ಸಿಕ್ಕುವದು; ತಟ್ಟಿರಿ ನಿಮಗೆ ತೆರೆಯುವದು; ಯಾಕೆಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು, ಹುಡುಕುವವನಿಗೆ ಸಿಕ್ಕುವದು, ತಟ್ಟುವವನಿಗೆ ತೆರೆಯುವದು; ನಿಮ್ಮಲ್ಲಿ ಯಾವನಾದರೂ ರೊಟ್ಟಿ ಕೇಳಿದರೆ ಮಗನಿಗೆ ಕಲ್ಲನ್ನು ಕೊಡುವನೆ? ಮೀನು ಕೇಳಿದರೆ ಹಾವನ್ನು ಕೊಡುವನೇ? ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡಬಲ್ಲಿರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿ ಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕೊಡುವವನಲ್ಲವೇ!

ಎಂಥ ಶ್ರೇಷ್ಟ ವಚನಗಳು ಇವಲ್ಲವೇ! ದೇವರು ಪ್ರಾರ್ಥನೆಗೆ ಉತ್ತರಿಸುವವನಾಗಿದ್ದಾನೆ! ಒಬ್ಬ ಪ್ರೀತಿಯ ತಂದೆಯು ತನ್ನ ಮಕ್ಕಳ ಅವಶ್ಯಕತೆ ಮತ್ತು ಭಿನ್ನಹಗಳಿಗೆ ಪ್ರತಿಕ್ರಯಿಸುವಂತೆ ದೇವರು ನಮಗೆ ಪ್ರತಿಕ್ರಯಿಸುವವನಾಗಿದ್ದಾನೆ.

ಈ ಪರಿಚ್ಛೇದವು ಅನೇಕ ವಿಷಯಗಳಲ್ಲಿ ನಮಗೆ ಸಂಬಂಧಿಸುವಂತದ್ದಾಗಿದೆ. ಉದಾಹರಣೆಗೆ, ದೇವರು ನಮ್ಮೆಡೆಕರುಣೆಯನ್ನು ತೋರಿದನು ಮತ್ತು ನಾವೂ ಸಹ ಇತರರೆಡೆಗೆ ಕರುಣೆಯನ್ನು ತೋರುವವರಾಗಿರಬೇಕು. ವಿಶೇಷವಾಗಿ, ನಾವು ನಮ್ಮ ಅವಶ್ಯಕತೆಗಳೊಡನೆ ದೇವರೆಡೆಗೆ ಹೋಗುವುದನ್ನು ಇದು ಒತ್ತಿ ಹೇಳುವುದಾಗಿದೆ - ಈ ಪ್ರಕರಣದಲ್ಲಿ, ಇತರರನ್ನು ಹೇಗೆ ಉಪಚರಿಸಬೇಕು ಎಂಬುದನ್ನು ತಿಳಿಯುವ ಅವಶ್ಯವಿದೆ. ಈ ರೀತಿಯಲ್ಲಿ ಸಂದೇಶವು, ಯಾಕೋಬ 1:5ಎರಲ್ಲಿ: "ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾದದ್ದಾರೆ ಅವನು ದೇವರನ್ನು ಕೇಳಿಕೊಳ್ಳಲಿ" ಎಂಬುದನ್ನು ತಿಳಿಯುವ ಅವಶ್ಯವಿದೆ.

"ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕಡುವವನಲ್ಲವೇ!" ಎಂದು 11ನೇಯ ವಚನವು ಹೇಳುತ್ತದೆ. "ದೊಡ್ಡ ಮನೆಯು ಒಳ್ಳೆಯದು ... ಅಥವಾ ಶ್ರೇಷ್ಟವಾದ ಸಾಗಾಣಿಕೆ ... ಅಥವಾ ಒಳ್ಳೆಯ ಸಂಬಂಳ ಪಡೆಯುವ ಕೆಲಸ ಆಗಿರಬಹುದು ಆದರೆ ಯಾವದು ನಿಜವಾಗಿ "ಒಳ್ಳೆಯದು"? ಆತ್ಮೀಕ ವರಗಳು ಉತ್ತಮವಲ್ಲವೇ? ಇವುಗಳಲ್ಲಿ ಎಲ್ಲತರದ ಜನರೊಡನೆ ಹೇಗೆ ವ್ಯವಹರಿಸಬೇಕು ಎಂಬುದನ್ನು ಅರಿಯುವ ಸಾಮರ್ಥ್ಯವು

ಪ್ರಬುದ್ಧತೆಯ ಆತ್ಮವಾಗಿದೆ. ನೀವು ಜನರೊಂದಿಗೆ ನಿಜವಾಗಿಯೂ ಹೊಂದಿಕೊಳ್ಳಲು ಬಯಸಿದ್ದಾದರೆ, ಸಂಬಂಧಗಳು ನಿಮಗೆ ಮಹತ್ವದ್ದಾಗಿದ್ದೇ ಆದರೆ, ಆಗ ನೀನು ಹೆಚ್ಚಿನ ಸಮಯವನ್ನು ಪ್ರಾರ್ಥನೆಯಲ್ಲಿ ಕಳೆ.

### ಎಲ್ಲರೊಡನೆ ಸಾಗುವುದಕ್ಕೋಸ್ಕರ ಅವಶ್ಯವಾದ 6:

## ನಾವು ಬಂಗಾರದ ನಿಯಮದಿಂದ ಜೀವಿಸಲೇಬೇಕು (ವಚನ 12).

ನಾವು ಕೊನೆಯ 12ನೇಯ ವಚನದತ್ತ ಬಂದಿದ್ದೇವೆ. ಈ ವಚನವು ಪರ್ವತ ಪ್ರಸಂಗದ ಉಪಾಂತ್ಯ ವಿಷಯ ಎಂದು ಕರೆಯಲ್ಪಡುತ್ತದೆ. ನಿಶ್ಚಿತವಾಗಿ ಇದು ಇತರರೊಡನೆ ಹೇಗೆ ಸಾಗುವದು ಎಂಬ ಚರ್ಚೆಯ ಪರಾಕಾಷ್ಟೆಯಾಗಿದೆ. ಈ ಪರಿಚ್ಛೇದವು "ಅಂತೂ ..." ಎಂದು ಆರಂಭವಾಗುತ್ತದೆ. ಅಂದರೆ ಇದು ಪ್ರಸಂಗದಲ್ಲಿ ಮಾನವ ಸಂಬಂಧದ ಬಗೆಗೆ ಎಲ್ಲವುಗಳ - ಅದು ಸಹೋದರನಾಗಿರಬಹುದು. ವೈರಿಯಾಗಿರಬಹುದು, ಅದು ಸ್ನೇಹಿತನ ಅಥವಾ ದ್ವೇಶಿಯ ಬಗೆಗಾಗಲಿ ಹೇಳಲ್ಪಟ್ಟ ಸಾರಾಂಶವು ಇದಾಗಿದೆ. ವಿಶೇಷವಾಗಿ, ಇದು 7:1-11ರಲ್ಲಿ ನಾವು ಕಲಿತಂತಹ ಎಲ್ಲರೊಡನೆ ಜೊತೆಯಾಗಿರುವ ಎಲ್ಲದರ ಮೊತ್ತವು ಇದಾಗಿದ್ದು ಅದು "ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ. ಇದೇ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ತಾತ್ಪರ್ಯ" ಎಂದು ಹೇಳುತ್ತದೆ. ನಾವು ಸಾಮಾನ್ಯವಾಗಿ "ನೀವು ಜನರು ನಿಮಗೆ ಏನುಮಾಡಬೇಕೆಂದು ಬಯಸುತ್ತಿರೋ ಅದನ್ನೇ ಅವರಿಗೆ ಮಾಡಿರಿ" ಎಂದು ಹೇಳುತ್ತವೆ. ಇದು ಬಹುಶ ಸಾರ್ವತ್ರಿಕವಾಗಿ ಚೆನ್ನಾಗಿ ತಿಳಿದಿರುವ ಯೇಸುವಿನ ಹೇಳಿಕೆಯಾಗಿದೆ. ಹೆಚ್ಚುಕಡಿಮೆ ಪ್ರತಿಯೊಬ್ಬರೂ[20] ಈ ಪದಗಳನ್ನು ಮೆಚ್ಚುವವರಾಗಿದ್ದಾರೆ; ನಿಯಮಗಳಿಂದ ಜೀವಿಸದವರೂ ಕೂಡಾ ಈ ತತ್ವವನ್ನು ಮೆಚ್ಚುವವ ರಾಗಿದ್ದಾರೆ.

ಯೇಸುವಿಗೆ ಆಧ್ಯತೆ ಕೊಡುತ್ತಾ ವಚನ 12ರಲ್ಲಿನ ತತ್ವದ ಮಾತುಗಳನ್ನು ಇತರರು ನಿನಗೆ ಏನನ್ನು ಮಾಡಲು *ಬಯಸುವುದಿಲ್ಲವೂ* ಅದನ್ನು ಇತರರಿಗೆ *ಮಾಡಬೇಡ*" ಎಂದು ಅನೇಕರು ತಪ್ಪಾಗಿ ಅರ್ಥೈಸುವವರಾಗಿದ್ದಾರೆ. ಇದನ್ನು ವ್ಯಕ್ತಪಡಿಸಿದೆಂದರೆ ಸಾಕ್ರಟಿಸ್, ಅರಿಸ್ಟಾಟೆಲ್, ಹಿಲೆಲ್ (ಗಮನಾರ್ಹವಾದ ಯೆಹೂದಿ ಬೋಧಕ), ಕನ್ ಫೂಶಿಯಸ್, ಮತ್ತು ಬುದ್ಧ. ಯೇಸು ಮಾತ್ರ "ಅಂತು ಜನರು ನಿಮಗೆ ಏನೇನು ..." ಎಂದು ಇದನ್ನು ಸಕಾರಾತ್ಮಕವಾದ ರೀತಿಯಲ್ಲಿ ವ್ಯಕ್ತಪಡಿಸಿದವನಾಗಿದ್ದಾನೆ.

ಸಕಾರಾತ್ಮತೆ ಮತ್ತು ಮಕಾರಾತ್ಮಕತೆಯ ಸಂಗತಿಗಳ ಮಧ್ಯದ ದೊಡ್ಡ ವ್ಯತ್ಯಾಸ ಇದ್ದು "ಇಲ್ಲ" ಎಂಬ ಪದ ಹೆಚ್ಚುಕಡಿಮೆ "ಸೇರಿಸ್ಕೊಳ್ಳುವಿಕೆ" ಅಥವಾ ಬಿಡಲ್ಪಟ್ಟದ್ದು ಅಷ್ಟೇ ಅಲ್ಲ ಅದಕ್ಕಿಂತಲೂ ಹೆಚ್ಚಿನದಾಗಿದೆ ಸಕಾರಾತ್ಮಕ ಸ್ವಮರೆಯುವಿಕೆಯ ವಿಷಯವಾದರೆ ನಕಾರಾತ್ಮಕವಾದ ಹೇಳಿಕೆಯು ಬಹುವಾಗಿ ಸ್ವರಕ್ಷಣೆಯ ವಿಷಯವಾಗಿದೆ. ಒಬ್ಬನು ಕೇವಲ ಒಳ್ಳೆಯದನ್ನು ಮಾಡುವ ಮೂಲಕ ಸಕಾರಾತ್ಮಕತೆಯನ್ನು ಸಂಪೂರ್ಣಗೊಳಿಸುವ ಹಾಗೆ ಒಬ್ಬನು ಏನೂ ಮಾಡದೆ ಇರುವ ಮೂಲಕ ನಕಾರಾತ್ಮಕತೆಯನ್ನು ಸಂಪೂರ್ಣಗೊಳಿಸುವುದಾಗಿದೆ.[21] ಒಬ್ಬನು ಧಾರ್ಮಿಕನಾಗಿದ್ದರೂ ಕೂಡಾ ನಕಾರಾತ್ಮಕ ತತ್ವವನ್ನು ಒಪ್ಪಿಕೊಂಡರೂ ಕೂಡ, ಅದು ಜೀವಿತದೆಡೆಗೆ ನೋಡುವ ನೈಸರ್ಗಿಕತೆಗೆ ಅನುಗುಣವಾದ ಮಾರ್ಗವಾಗಿರುತ್ತದೆ ಆದರೆ ಎರಡನೆಯದು ಧರ್ಮದ ಮೇಲೆ ಶುದ್ಧವಾಗಿ ನೆಲೆಗೊಂಡದ್ದಾಗಿರುತ್ತದೆ (ವಚನ 12). ಪಿಲಿಪ್ಸ್ ಭಾಷಾಂತದಲ್ಲಿ "ಇದು ನಿಜ ಧರ್ಮದ ಸುಗಂಧವಾಗಿದೆ" ಎಂದಿದೆ.[22]

ಈ ಪರಿಚ್ಛೇದವು ಚರ್ಚೆಯ ಕೊನೆಯಲ್ಲಿ ಕಂಡುಬರುವುದಾಗಿದೆ. ಯಾಕೆಂದರೆ ಯಾವುದು ಮುಂಚೆ ಬರಬೇಕೆಂದು ಇದು ಸರಾಂಶೀಕರಿಸುವುದಾಗಿದೆ. ಯಾಕೆಂದರೆ ಇದು ಸಂಬಂಧದಲ್ಲಿ ಹುಟ್ಟಿಕೊಳ್ಳುವ ಇದು ಇತರ ಸಾವಿರ ಮತ್ತು ಒಂದು ಇನ್ನೊಂದಕ್ಕಿಂತ ಹೆಚ್ಚು ಪರಿಸ್ಥಿತಿಗಳನ್ನು

ತಲಪುವ ತತ್ವಗಳನ್ನು ಸಾರಿಹೇಳುವುದಾಗಿದೆ. ಪ್ರತಿಯೊಂದು ಆಧ್ಯತೆಯಿಂದಿರುವ ಸಂಬಂಧಗಳ ಬಗೆಗಿನ ಸಮಸ್ಯೆಗಳನ್ನು ವ್ಯವಹರಿಸಿದ ಪುಸ್ತಕವನ್ನು ನೀನು ಹೊಂದಿರುವಿ ಎಂದು ಊಹಿಸಿಕೋ. ಅದರ ವಿಸ್ತಾರವು ಎಷ್ಟು ದೊಡ್ಡದಿರಬೇಕೆಂದು ಪ್ರಯತ್ನಿಸು. ಇನ್ನೊಬ್ಬರೊಡನೆ ಸಂಭಾಷಿಸುತ್ತ ಇರುವುದನ್ನು ಮತ್ತು ಬಿಕ್ಕಟ್ಟು ತಾರ್ಕಕ್ಕೇರುವುದನ್ನು ನೀನು ಊಹಿಸಿಕೋ. ಅದರೊಡನೆ ವ್ಯವಹರಿಸಲು ನೀನು ಬಾವವೇಷದಿಂದ ಪುಸ್ತಕದಲ್ಲಿನ ಕಾಗದದಲ್ಲಿ ಅದರೊಡನೆ ಹೇಗೆ ವ್ಯವಹರಿಸಬೇಕು ಎಂಬುದನ್ನು ನೀನು ಹುಡುಕಲು ಆರಂಭಿಸಬಹುದು. ಅಂಥ ಹೊತ್ತಿಗೆಯನ್ನು ಕೊಡುವ ಬದಲು ಇದಕ್ಕೆ ಪ್ರತಿಯಾಗಿ ಯಾವುದೇ ಬಿಕ್ಕಟ್ಟಿನೊಡನೆ ಹೇಗೆ ವ್ಯವಹರಿಸಬೇಕೆಂಬುದು ಇಲ್ಲಿದೆ: “ಪರಿಸ್ಥಿತಿಯು ಪ್ರತಿಕೂಲವಾಗಿದ್ದಿದ್ದೇ ಆದರೆ? ನಾನು ಹೇಗೆ ನಡಿಸಿಕೊಳ್ಳಲ್ಪಡಲು ಬಯಸುತ್ತೇನೆ? ಎಂದು ನಿನ್ನನ್ನು ಕೇಳಿಕೋ” ನಂತರ ಆ ರೀತಿಯಲ್ಲಿ ಇತರರನ್ನು ನಡೆಸಿಕೋ ಎಂದು ಯೇಸು ಹೇಳುತ್ತಾನೆ.

ಇದು ಎಷ್ಟು ಸರಳವಾಗಿದೆಯಲ್ಲಾ, ಮತ್ತು ಅಷ್ಟೇ ಗಾಢವಾಗಿಯೂ ಇದೆ! ಈ ಮೂಲದ ಮೇಲೆ ನಾವು ನಮ್ಮ ಜೀವಿತವನ್ನು ನಡೆಸುವುದಾದರೆ ಜಗತ್ತು ಹೇಗಿರುತ್ತದೆ ಎಂಬುದನ್ನು ನೀನು ಚಿತ್ರಿಸಬಹುದೇ? ಪ್ರತಿಯೊಂದು ವ್ಯವಹಾರಗಳು ಇಷ್ಟೊಂದು ಅನುಸರಣೀಯವಾದದ್ದೇ ಆದರೆ ಪ್ರತಿಯೊಬ್ಬ ಉದ್ಯೋಗಿಯು ತನ್ನನ್ನು ಹೇಗೆ ನೋಡಿಕೊಳ್ಳುತ್ತಾನೋ ಹಾಗೆಯೇ ಇತರರನ್ನು ನೋಡಿಕೊಂಡಿದ್ದೇ ಆದರೆ? ಪ್ರತಿಯೊಂದು ಸಂಘಗಳು ಈ ತತ್ವವನ್ನು ಗೌರವಿಸಿದ್ದೇ ಆದರೆ? ಪ್ರತಿಯೊಂದು ಮನೆಯಲ್ಲಿರುವ, ಪ್ರತಿಯೊಂದು ಶಾಲೆಯಲ್ಲಿ, ಪ್ರತಿಯೊಂದು ರಾಜ್ಯದಲ್ಲಿ, ಪ್ರತಿಯೊಂದು ಸಭೆಯಲ್ಲಿ ಇರುವ ಜನರು ತಾವು ಹೇಗೆ ನಡೆಸಿಕೊಳ್ಳಬೇಕೆಂದು ಬಯಸುತ್ತಾರೋ ಹಾಗೇ ಇತರರನ್ನು ನಡೆಸಿಕೊಂಡಿದ್ದಾದರೆ?

ಕರ್ತನು ಬಯಸುವ ಸಾಮಾನ್ಯ ಪರಿಜ್ಞಾನವನ್ನು ಬಳಸಲು ಕಡೆಯ ಸಲ ನಾನು ನಿಲುಗಡೆಯನ್ನು ಕೊಡುತ್ತೇನೆ. ಕರ್ತನು ನಾವು ಸಾಮನ್ಯ ಪರಿಜ್ಞಾನವನ್ನು ಬಳಸುವದನ್ನು ಬಯಸುವವನಾಗಿದ್ದಾನೆ. ಮತ್ತಾಯ 7:12 ನಮ್ಮನ್ನು ನಾವು ಮತ್ತೊಬ್ಬರ ಸ್ಥಾನದಲ್ಲಿ ಇರಿಸಿಕೊಂಡಾಗ ಕೆಟ್ಟದ್ದನ್ನು ಮಾಡಲು ಬಯಸದೆ ಒಳ್ಳೆಯದಕ್ಕೆ ಅಂಟಿಕೊಳ್ಳುವವರಾಗಿರುತ್ತೇವೆ ಮತ್ತು ಮೂರ್ಖರಾಗುವದಕ್ಕಿಂತ ಜಾಣರಾಗುವವರಾಗಿತ್ತೇವೆ ಎಂದು ಊಹಿಸುವುದಾಗಿದೆ.[23] ಇಲ್ಲವಾದರೆ, ಕುಡುಕನಿಗೆ ಹೊಂದಿರುವ ಕಾರಣದಂತೆ “ಜನರಿಂದ ನಾನೇನನ್ನು ಬಯಸುತ್ತೇನೆಂದರೆ ನನಗೆ ಮಧ್ಯವನ್ನು ಕೊಡಲಿ ಎಂದು, ನಾನು ಇತರರಿಗೆ ಮಾಡುವುದನ್ನೇ ಅವರೂ ನನಗೆ ಮಾಡಲಿ ಮತ್ತು ಪ್ರತಿಯೊಬ್ಬರೂ ಮಿತಿಮೀರಿ ಕುಡಿಯಲಿ ನನಗೆ ಬಾಟಲಿಗಳನ್ನು ಕೊಡಲಿ”[24] ಒಂದು ವೈಯಕ್ತಿಕ ದೃಷ್ಟಾಂತ ಹೇಳಬೇಕೆಂದರೆ ನನ್ನ ಹೆಂಡತಿಯು ಲಿವರ್ ಮತ್ತು ಈರುಳ್ಳಿ ದ್ವೇಷಿಸುವವಳಾಗಿದ್ದಾಳೆಂಬುದು ಸತ್ಯವಾಗಿದ್ದರೂ ಕೂಡಾ “ನಾನು ಲಿವರ್ ಮತ್ತು ಈರುಳ್ಳಿ ತಿನ್ನಲು ಬಯಸುತ್ತೇನೆ.[25] ಮುಂದಿನ ಸಾರಿ ನಾನು ಆಹಾರವನ್ನು ಸಿದ್ಧಮಾಡಬೇಕಾಗಿದ್ದರಿಂದ ನಾನು ಹೆಂಡತಿಗಾಗಿ ಲಿವರ್ ಮತ್ತು ಈರುಳ್ಳಿಯನ್ನು ಮಾಡುವವನಾಗಿದ್ದೇನೆ” ಎಂದು ತರ್ಕಮಾಡುವ ಉಚಿತವಲ್ಲ.

ಬಂಗಾರದ ನಿಯಮವು ಯಾವುದರ ಬಗೆಗೆ ಮಾತನಾಡುತ್ತಿದೆ ಎಂಬುದನ್ನು ನಮ್ಮ ಕೆಲವರು ಅರ್ಥಮಾಡಕೊಂಡಿರಬಹುದು ಎಂದು ನಾನು ಯೋಚಿಸುತ್ತೇನೆ. ಎಲ್ಲಾ ಜನರಿಗೆ ಅನ್ವಯಿಸುವಂತ ಸಾಮಾನ್ಯ ಉದಾಹರಣೆಗಳನ್ನು ಈ ಪರಿಚ್ಛೇದವು ಹೊಂದಿದೆ. ನಾವೆಲ್ಲರೂ ಅಂಥ ಕರುಣ ಮತ್ತು ಅನುಕಂಪದಿಂದ ನಡಿಸಿಕೊಳ್ಳಲ್ಪಡಬೇಕೆಂದು ಬಯಸುವವರಾಗಿದ್ದು ಇತರರನ್ನು ಅದೇ ರೀತಿಯಲ್ಲಿ ನಡೆಸಿಕೊಳ್ಳುವದೂ ಸಹ ನಮಗೆ ಅವಶ್ಯವಿದೆ. ನಿಮ್ಮ ಪಟ್ಟಿಯನ್ನು ನೀವು ಬೆಳಸಬಹುದು: ಇತರರು ನಮ್ಮನ್ನು ಅರ್ಥಮಾಡಿಕೊಳ್ಳಬೇಕೆಂದು ನಾವು ಬಯಸುವವರಾಗಿದ್ದೇವೆ, ಕರುಣೆಯ ಆವರಣದಿಂದ ನಮ್ಮ ಮೂರ್ಖತನದ ಕೊರತೆಯನ್ನು ಮುಚ್ಚಿಹಾಕಬೇಕು, ನಮ್ಮನ್ನು ಕ್ಷಮಿಸಬೇಕೆ ಅಂದರೆ “ನಾವೂ ಹಾಗೇ ಮಾಡಬೇಕು” ನಾವು ಇತರರಿಂದ ಹೊಂದಿದಂತೆಯೇ ನಾವು ಅವರಿಗೆ ಮಾಡುವವರಾಗಿದ್ದೇವೆ.

ಪ್ರತಿಯೊಬ್ಬರೂ ಪ್ರತಿಯೊಬ್ಬರನ್ನು ತಮ್ಮ ಹಾಗೆ ನಡೆಸಿಕೊಳ್ಳುವ ಜಗತ್ತಿನಲ್ಲಿ ನಾವು ಜೀವಿಸುವುದಾದರೆ ಎಂಥ ಸುಂದರವಾದುದಲ್ಲವೇ? ನಾವು ಪ್ರತಿಯೊಬ್ಬರನ್ನು ಹಾಗೆಯೇ ನೋಡಿಕೊಂಡಿದ್ದಾರೆ ಎಂಥ ಸುಂದರವಾಗಬಹುದಲ್ಲವೇ?

## ಮುಕ್ತಾಯ

ಗಾಂಧೀಜಿಯವರು ಮೂಲತವಾಗಿ ಕ್ರೈಸ್ತರಿಂದ ಪ್ರಭಾವಿತರಾಗಿದ್ದರು,[26] ವಿಶೇಷವಾಗಿ ಬಂಗಾರದ ನಿಯಮವನ್ನು ಒಳಗೊಂಡ ಶ್ರೇಷ್ಟವಾದ ಪರ್ವತ ಪ್ರಸಂಗದಿಂದ ಎಂದು ನಾನು ಕೇಳಿದ್ದೇನೆ. ಅವರು ಯಾಕೆ ಕ್ರೈಸ್ತರಾಗಲಿಲ್ಲ ಎಂದು ಕೇಳಿದಾಗ ಅವರು ದುಃಖದಿಂದ ಕ್ರೈಸ್ತರಾದರೂ ಆ ನಿಯಮಗಳಿಂದ *ಜೀವಿಸುವುದನ್ನು* ಯಾರಲ್ಲಿ ಕಾಣಲಿಲ್ಲ ಎಂದು ಉತ್ತರಿಸಿದರು. ನಾವು ಅಧ್ಯಯನಮಾಡಿದ ತತ್ವಗಳಿಂದ ನಾನು ಜೀವಿಸುತ್ತಿದ್ದೇನೆಯಾ? ನೀವು?

ಮತ್ತಾಯ 7:1-12 ಈ ಚಿರಪರಿಚಿತವಾದ ವಾಕ್ಯಗಳು ಆಗಿವೆ:

> ಇಕ್ಕಾಟ್ಟಾದ ಬಾಗಿಲಿನಿಂದ ಒಳಕ್ಕೆ ಹೋಗಿರಿ. ನಾಶಕ್ಕೆ ಹೋಗುವ ಬಾಗಿಲು ದೊಡ್ಡದು, ದಾರಿ ಅಗಲವೂ; ಅದರಲ್ಲಿ ಹೋಗುವವರು ಬಹು ಜನ, ನಿತ್ಯಜೀವಕ್ಕೆ ಹೋಗುವ ಬಾಗಿಲು ಇಕ್ಕಟ್ಟು ದಾರಿ ಬಿಕ್ಕಟ್ಟು, ಅದನ್ನು ಕಂಡುಹಿಡಿಯುವವರು ಸ್ವಲ್ಪಜನ (ವಚನಗಳು 13, 14).

ಇಕ್ಕಟ್ಟಾಗಿರುವ ಬಾಗಿಲು ಮಾತ್ರವೇ ಪ್ರವೇಶಕ್ಕೆ ಮಾರ್ಗ ಎಂದು ಸೂಚಿಸಲು ನಾನು ಧೈರ್ಯ ಹೊಂದಿದ್ದೇನಾ ...

- ಯಾರು ತೀರ್ಪುಗಾರರಾಗಿರುವುದಿಲ್ಲವೋ ಅವರೇ?
- ತಮ್ಮ ಸ್ವಂತ ಜೀವಿತದಲ್ಲಿ ಬದಲಾವಣೆಯನ್ನುಮಾಡುವ ಮೊದಲ ಕಾಳಜಿಯನ್ನು ಹೊಂದಿರುತ್ತಾರೆಯೇ?
- ಇತರರಿಗೆ ನಮ್ರತೆಯಿಂದ ಮತ್ತು ಸೂಕ್ಷ್ಮವಾಗಿ ಸಹಾಯಿಸುವವರಾಗಿರುತ್ತಾರೆಯೇ?
- ಕಠಿಣತೆಯಲ್ಲಿ ಭಿನ್ನತೆಯೊಡನೆ ಹೇಗೆ ವ್ಯವಹರಿಸಬೇಕೆಂದು ಕಲಿತವರಾಗಿರುತ್ತಾರೆಯೇ?
- ದೇವರ ಮೇಲೆ ಆತುಕೊಳ್ಳುವುದನ್ನು ಸಂಕಲ್ಪ ಮಾಡಿಕೊಂಡಿರುತ್ತಾರೆಯೇ?
- ಬಂಗಾರದ ನಿಯಮ ಮೇಲೆ ಜೀವಿಸುವವರಾಗಿರುತ್ತಾರೆಯೇ?

ಹೌದು, ಮತ್ತಾಯ 7:13, 14 ಮಾನವೀಯ ಸಂಬಂಧಗಳು ಹೆಚ್ಚಾಗಿ ಅನ್ವಯಿತ ವಾಗುವುದಾಗಿದೆ ಎಂದು ನಾನು ಅರಿತಿದ್ದೇನೆ, ಆದರೆ ನಿಶ್ಚಿಯವಾಗಿ ಈ ಪರಿಚ್ಛೇದವು ಇದನ್ನು ಒಳಗೊಂಡಿದೆ. ಇತರ ಜನರ ಜೊತೆ ಸಾಗುವದು ಎಷ್ಟೊ ಮಹತ್ವವಾದದಾಗಿದೆ ಅಲ್ಲವೇ.

ಈ ಹಿಂದೆ ನೀನು ಮಾಡಲೇಬೇಕಾದ ಉಪಚಾರದಲ್ಲಿ ಎಂದಾದರೂ ವಿಫಲವಾಗಿದ್ದೆಯಾ? ಹಾಗೆಯೇ ನಾನೂ. ನಾವು ಪಶ್ಚಾತ್ತಾಪಪಟ್ಟು ಭವಿಷ್ಯದಲ್ಲಿ ಒಳ್ಳೆಯದನ್ನು ಮಾಡಲು ನಿಶ್ಚಿಯಿಸಿದ್ದೇ ಆದರೆ ಮಾತ್ರ. ದೇವರನ್ನು ಆತನ ಕೃಪೆಯ ಮೂಲಕ ಅರಿತುಕೊಳ್ಳುವದು, ನಮ್ಮ ನ್ಯೂನ್ಯತೆಗಳನ್ನು ಕ್ಷಮಿಸುವದು ಅದ್ಭುತವಾದದ್ದು ಆಗಿದೆಯಲ್ಲವೇ?[27] ಈ ಪ್ರಸಂಗದಲ್ಲಿ ಮಾಡಿದ ಮೊದಲ ಸಂಗತಿ ಎಂದರೆ ನಮ್ಮ ಜೀವಿತದಲ್ಲಿ ಬದಲಾವಣೆಯನ್ನು ತರುವ ಉದ್ದೇಶದ ಬಗೆಗೆ ಕಾಳಜಿಯುಳ್ಳವರು ಆಗಿರುವದು ಆಗಿದೆ. ಇದು ಸ್ವಪರೀಕ್ಷೆಗೆ ಒಳ್ಳೆಯ ಸಮಯವಾಗಿದೆ. ಮಹತ್ವದ ಬದಲಾವಣೆಗಾಗಿ ನಿನ್ನ ಜೀವಿತವು ಕೂಗುವುದಾಗಿದ್ದರೆ ನಾವು ಸಹಾಯ ಮಾಡುವವರಾಗಿದ್ದೇವೆ. ನಮಗೆ ತಿಳಿಯಪಡಿಸಿರಿ.[28]

ಟಿಪ್ಪಣಿಗಳು

[1]KJVಯಲ್ಲಿ "ಅಣು" ಎಂದಿದ್ದು ಹಳೆಯ ಇಂಗ್ಲೀಷ್ ಪದದ ಅರ್ಥವು "ಅತಿ ಚಿಕ್ಕ ಕಣ" ಎಂದಾಗಿದೆ. [2]ಮನೆಗೆ ಆಧಾರವಾಗಿರುವ ತೊಲೆ ಅಥವಾ ಮಾಳಿಗೆಗೆ ಆಧಾರವಾಗುವ ಕಂಬ ಎಂದು ಭಾವಿಸುವವರಾಗಿದ್ದಾರೆ. ಏನೇ ಆದರೂ ಇದು ಕಟ್ಟಿಗೆಯ ಒಂದು ದೊಡ್ಡ ತುಂಡಾಗಿದೆ. [3]ಇನ್ನೊಂದು ಉದಾಹರಣೆಯನ್ನು ಮತ್ತಾಯ 23:24ರಲ್ಲಿ ನೋಡಿರಿ. [4]ನೀವು ಇರುವೆಡೆ ಇದು ಯೋಗ್ಯವಾಗಿದ್ದೇ ಆದರೆ ನೀವು ಇದನ್ನು "Abbott and Costello ಚಲನ ಚಿತ್ರ ಅಥವಾ The Three Stooges ರಿಂದಾದದು ಎಂದು ಹೇಳಬಹುದು!" [5]ಕಣ್ಣಲ್ಲಿ ತೊಲೆಯಿರುವ ಮನುಷ್ಯನು ರವೆಯ ಕಣ್ಣಿನ ಮನುಷ್ಯನಿಗೆ ಸಹಾಯಕ್ಕಾಗಿ ಪ್ರಸ್ತಾಪಿಸುವ ಮನುಷ್ಯನು ಕೂದಲನ್ನು ಬೆಳಸುವುದಕ್ಕೆ ನನಗೆ ಪ್ರಸ್ತಾಪಿಸುವುದಕ್ಕೆ ಸುಮಾರಾಗಿ ಸಮಾನವಾದದ್ದಾಗಿದೆ (ನಾನು ಬೋಳು ತಲೆಯವನಾಗಿದ್ದೇನೆ) (ಯಾಜಕಕಾಂಡ 13:41; KJV). [6]ದಾವೀದನು ಆತನನ್ನು ಕೊಲ್ಲುವುದಕ್ಕೆ ಸಿದ್ಧನಿದ್ದನು ಎಂದು. [7]KJVಯಲ್ಲಿ "ನೋಡುವವನು" ಎಂದಿದೆ. [8]ಮತ್ತಾಯ 7:3ರಲ್ಲಿನ ಗ್ರೀಕ್ ಪದವಾದ "ಶ್ರೇಷ್ಟವಾದ ಎದ್ದು ಕಾಣುವಿಕೆಯನ್ನು ಸೂಚಿಸುವುದಕ್ಕಿಂತ" ಸಾಮಾನ್ಯವಾಗಿ "ನೋಡು" ಮತ್ತು "ಹೆಚ್ಚಿನ ಉದ್ದೇಶ ಹಾಗೂ ಹೃತ್ಪೂರ್ವಕವಾದ ಭಾವನೆಯನ್ನು" ವ್ಯಕ್ತಪಡಿಸುವುದು ಆಗಿದೆ. (W. E. Vine, *The Expanded Vine's Epository Dictionary of New Testament Words*, ed. John R. Kohlenberger III with James A. Swanson [Minneapolis: Bethany House Publishers, 1984], 106.) [9]ನನ್ನ ಕೇಳುಗರಿಗೆ ದೂರವಾಣಿ ಕಂಬವು "ಜಂತಿ" ಅಥವಾ "ತೊಲೆಗೆ" ಪರಿಚಿತವಾಗಿದೆ. ನಿಮ್ಮ ಕೇಳುಗರಿಗೆ ಪರಿಚಿತವಾಗಿರುವ ಪದವನ್ನು ಬಳಸಿರಿ. [10]J. B. Phillips, *The New Testament in Modern English* (New York: Macmillan Co., 1958), 344. (Emphasis mine.)

[11]"ಪ್ರೀತಿಯು ಪ್ರೀತಿಸುವವರಿಗಾಗಿ ಒಳ್ಳೆಯದೆಂದು ನೋಡುವುದಾಗಿದೆ" ಎಂಬ ಇದು ಪ್ರೀತಿಯ ಒಂದು ಶ್ರೇಷ್ಟ ವ್ಯಾಖ್ಯಾನವನ್ನು ಸೂಚಿಸುವುದಾಗಿದೆ. ನಿಜವಾದ ಪ್ರೀತಿಯು ತಾನು ಪ್ರೀತಿಸುವವರ ಪಾಪವನ್ನುಲಕ್ಷಕ್ಕೆ ತಾರದು. ಪಾಪವು ಆತನ ಆತ್ಮದ ಮೇಲೆ ಒತ್ತಾಯವನ್ನು ತಾರದು. ಮತ್ತಾಯ 18:15ನ್ನು ಸಹ ನೋಡಿರಿ. [12]ಮತ್ತಾಯ 5:23, 24ರಲ್ಲಿನ "ಮೊದಲು ನಿನ್ನ ಸಹೋದರನ ಸಂಗಡ ಒಂದಾಗು ಎಂದು ಯೇಸು ಹೇಳಿದ್ದಕ್ಕೆ ಸಮಾನವಾದರಿಂದ ತೆಗೆಯಲ್ಪಟ್ಟಿದೆ (ಸಹಾಯಮಾಡುವುದನ್ನು) ನಿವೇದಿಸುವದನ್ನು ಬಿಡಿಸುವದು ಕ್ರಿಸ್ತನ ಉದ್ದೇಶವಾಗಿರಲಿಲ್ಲ ಬದಲಾಗಿ ಆ ನಿವೇದನೆ ಮಾಡುವ ಮೊದಲು ಮಾಡಬೇಕಾದ ಅವಶ್ಯಕತೆಯು ಏನಾಗಿತ್ತೋ ಅದನ್ನು ಒತ್ತಿ ಹೇಳುವುದೇ ಆಗಿತ್ತು. [13]ನಿಮ್ಮ ಕಣ್ಣಿನಲ್ಲಿ ರವೆಯನ್ನು ತೆಗೆಯಲು ಸಹಾಯಿಸಲು ನೀವು ಯಾರಿಗಾದರೂ ಕೇಳಿ ಕೊಂಡಿದ್ದೇ ಆದರೆ ಆತನು ಕಟುಕನ ಕತ್ತಿಯನ್ನು ತೆಗೆದುಕೊಂಡು ನಿಮ್ಮ ಬಳಿ ಬಂದಿದ್ದಾದರೆ ನಿಮ್ಮ ಪ್ರತಿಕ್ರಿಯೆಯು ಏನಾಗಿರುತ್ತದೆ? [14]ಹಂದಿಯು "ಅಶುದ್ಧತೆ"ಗೆ ಹೆಸರುವಾಸಿಯಾಗಿದೆ (ಯಾಜಕಕಾಂಡ 11:7); ನಾಯಿಯು ಅಶುದ್ಧವಾದದ್ದು ಯಾಕೆಂದರೆ ಇದಕ್ಕೆ ಸೀಳಿದ ಗೊರಸುಗಳಿರುವುದಿಲ್ಲ ಮತ್ತು (ದನಗಳಂತೆ) ಮೆಲಕುಹಾಕುವುದಿಲ್ಲ (ವಚನಗಳು 3, 4). [15]ನನ್ನ ಭಾಗದಲ್ಲಿ, ವರ್ಷಗಳ ಹಿಂದೆ ನಾವು ಹೆಸರಾಂತ "razorback" ಬಗೆಗೆ ಮಾತನಾಡುತ್ತಿದ್ದವು. ಬೇರೆ ಸ್ಥಳಗಳಲ್ಲಿ ಬೋಧಕರು ಕಾಡುಹಂದಿಯನ್ನು, ನರೋಲಿಯ ಹಂದಿಯನ್ನು peccary ಉದಾಹರಿಸಬಹುದು. [16]"ನಾನು ಇನ್ನು ಮುಂದೆ ಇರುವುದಿಲ್ಲ" ಎಂಬುದನ್ನು ಸೂಚಿಸುವ ಸಂಕೇತಾರ್ಥಕ ರೀತಿಯಾಗಿದೆ. [17]ಯೇಸು ತಾನೇ ತನ್ನ ಮುತ್ತುಗಳನ್ನು ಹಂದಿಗಳ ಮುಂದೆ ಚಲ್ಲುತ್ತಿದ್ದಾನೆ; ಕೆಲ ಸಂದರ್ಭಗಳಲ್ಲಿ ಆತನು ಫರಿಸಾಯರಿಗೆ ಯಾವ ಉತ್ತರನ್ನೂ ಕೊಡುವುದಿಲ್ಲ (ಮತ್ತಾಯ 15:2, 3; 21:23-27). ಆತನು ಹೆರೋದನೊಡನೆ ಮಾತನಾಡಲಿಲ್ಲ (ಲೂಕ 23:9). [18]ಎಫೆಸ 5:16. [19]ಈ ಪ್ರಸಂಗವನ್ನು ಬೋಧಿಸುವಾಗ, "ನಾನು ಜಪಾನಿಗೆ ಭೇಟಿ ಕೊಟ್ಟಾಗ, ಇಂಗ್ಲೀಷ್ ಅರ್ಥಮಾಡಿಕೊಳ್ಳದವರ ಕೂಡ ನಾನು ಬಹಳ ಹೊತ್ತು ಮಾತನಾಡಲು ಪ್ರಯತ್ನಿಸಲು ಕಳಿಯಲಿಲ್ಲ. ನಾನು ಹೇಳುತ್ತಿರುವುದೇನು ಎನ್ನುವುದರ ಬಗೆಗೆ ಯಾವ ವಿಚಾರವೂ ಗೊತ್ತಿಲ್ಲದವರು ಇದ್ದಾರೆ ಎಂದು ನಾನು ಕಂಡುಕೊಂಡಮೇಲೆ ನಾನು ಮುಂದಿನ ವ್ಯಕ್ತಿಯೆಡೆಗೆ ಸರಿಯೆನು" ಎಂಬಂತಿರುವ ವೈಯಕ್ತಿಕ ದೃಷ್ಟಾಂತವನ್ನು ನಾನು ಬಳಸುತ್ತೇನೆ. ಇದಕ್ಕೆ ಸಮಾನವಾದ ಉದಾಹರಣೆಗಳು ನಿಮ್ಮಲ್ಲಿದ್ದರೆ ನೀವೂ ಹಂಚಿಕೊಳ್ಳಬಹುದು. [20]ಕೆಲವರು ಇದನ್ನು ಮೆಚ್ಚುವದಿಲ್ಲ; ಇತರರ ಭಾವನೆಗಳನ್ನು ಪರಿಗಣಿಸಲು ಇರುವಂತ ಬಲಹೀನತೆ ಎಂದು ಅವರು ಇದನ್ನು ಪರಿಗಣಿಸುವವರಾಗಿದ್ದಾರೆ.

[21]ನಕಾರಾತ್ಮಕ ವಿವರಣೆಯ ನೆಲೆಯ ಮೇಲೆ ಮತ್ತಾಯ 25ರಲ್ಲಿ ನಿಂದಿಸಲ್ಪಟ್ಟ "ಆಡು" ರಕ್ಷಿಸಲ್ಪಟ್ಟಿತು. ಅವರು ಅವಶ್ಯವಾಗಿ ಕೆಟ್ಟದ್ದನ್ನು ಮಾಡುತ್ತಿರಲಿಲ್ಲ, ಆದರೆ ಒಳ್ಳೆಯದನ್ನು ಮಾಡುವುದನ್ನು ನಿರ್ಲಕ್ಷಿಸಿದ್ದರು (ನೋಡಿರಿ ವಚನಗಳು 31, 32, 41, 42). [22]ಪಿಲಿಪ್ಪಿ, 14. [23]J. W. McGarvey

and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 265. [24]"ಮಿತಿಮೀರಿ ಕುಡಿಯುವವ" ಮಧ್ಯಪಾನೀಯದ ಬಳಕೆಯ ಮಾತು ಇದಾಗಿದೆ. [25]ಲಿವರ್ (ಕರುವಿನ ಲಿವರ್ ಅಥವಾ ಹಂದಿಯ ಲಿವರ್) ಇದನ್ನು ಈರುಳ್ಳಿಯೊಂದಿಗೆ ಬೇಯಿಸುವದು U.S. ನಲ್ಲಿ ಸಹಜ ಸಾಮಾನ್ಯವಾದ ಅಡುಗೆ ಆಗಿದೆ. ಇಂಥ ಪದಾರ್ಥವು ಕೆಲವರಿಂದ ತಿರಸ್ಕರಿಸಲ್ಪಡುತ್ತದೆ ಮತ್ತು ಕೆಲವರಿಂದ ಇಷ್ಟಪಡುವುದಾಗಿ ಇದೆ. [26]ರಾಷ್ಟ್ರಿಯ ಚಳುವಳಿಯ ನಾಯಕರಾದ ಮಹಾತ್ಮ ಗಾಂಧಿ (1869-1948), ಇಪ್ಪತ್ತನೆಯ ಶತಮಾನದ ಅತ್ಯಂತ ಪ್ರಭಾವಿ ನಾಯಕರಲ್ಲಿ ಒಬ್ಬರಾಗಿದ್ದರು. [27]ನಿಜ ಪಶ್ಚಾತ್ತಾಪದ ಭಾಗಾವಾಗಿದ್ದು ಭವಿಷ್ಯದಲ್ಲಿ ಉತ್ತಮವಾದದ್ದನ್ನು ಮಾಡಲು ಸಂಕಲ್ಪ ಮಾಡುವುದೇ ಆಗಿದೆ. [28]ಈ ಪ್ರಸಂಗವನ್ನು ಬೋಧಿಸುವಾಗ, ಅನ್ಯ ಪಾಪಿಗಳಿಗೆ ಅಂದರೆ ಕ್ರಿಸ್ತನೆಡೆಗೆ ಎಂದಿಗೂ ಬರದವರು ಹೇಗೆ ರಕ್ಷಿಸಲ್ಪಡಬೇಕು (ಯೋಹಾನ 3:16; ಮಾರ್ಕ 16:16) ಮತ್ತು ತಪ್ಪುಮಾಡುವ ಕ್ರೈಸ್ತರು ಹೇಗೆ ಪುನ ತುಂಬಿಸಲ್ಪಡಬೇಕು (ಅಪೊಸ್ತಲರ ಕೃತ್ಯಗಳು 8:22; ಯಾಕೋಬ 5:16) ಎಂದು ನೀವು ಹೇಳಬೇಕು. ಏನೇ ಆಗಲಿ ಆತ್ಮೀಕ ಬದಲಾವಣೆಗಾಗಿ ಹೆಚ್ಚಿನ ಕುತೂಹಲದಿಂದ ಬದಲಾವಣೆಗಳು ಆಗುವುದಿಲ್ಲ.